ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 9 ಸಂ. 1 ಜನವರಿ 2012 ರೂ.15

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ
(ಅನು: ಶ್ಯಾಮಲಾದೇವಿ)

ನಾವು ಹೊಸ ವರ್ಷವನ್ನು ಪ್ರವೇಶಿಸಿದ್ದೇವೆ. 2012ನ್ನು ಪ್ರವೇಶಿಸಿದ್ದೇವೆ. 2011, ಪ್ರಾರಂಭಗಳ ವರ್ಷವಾಗಿತ್ತು. 2012, ಘಟನೆಗಳ ವರ್ಷವಾಗಿದೆ.

2011ರಲ್ಲಿ, ನಾವು ಹೊಸ ಚೈತನ್ಯಗಳನ್ನು ಪಡೆದೆವು. ಜಾಗೃತಿಗಳನ್ನು ನೋಡಿದೆವು. ವಾಸ್ತವಗಳು ಬಯಲಾಗುವುದನ್ನು ನೋಡಿದೆವು. ಪ್ರತಿಭಟನೆಗಳನ್ನು ನೋಡಿದೆವು. ಪ್ರಜ್ಞಾವಲಯದಲ್ಲಿ ಮಹತ್ತರ ಬದಲಾವಣೆಗಳುಂಟಾದವು. ನಾವು ಹೊಸ ಪ್ರಾರಂಭಗಳನ್ನು ಅನುಭವಿಸಿದೆವು. ಇವೆಲ್ಲವೂ ವೈಯಕ್ತಿಕ ಮಟ್ಟದಿಂದ ಜಾಗತಿಕ ಮಟ್ಟದವರೆಗೆ ಸಂಭವಿಸಿದವು. ಹಠಾತ್ತಾದ ಬದಲಾವಣೆಗಳೇನೂ ಸಂಭವಿಸಲಿಲ್ಲ. ಅವುಗಳನ್ನು ನಾವು ನಿರೀಕ್ಷಿಸಿಯೂ ಇರಲಿಲ್ಲ. ಪ್ರಳಯ, ಅಂದರೆ ಬದಲಾವಣೆ, ಒಂದು ಕ್ರಮೇಣವಾಗಿ ಆಗುವ ಪ್ರಕ್ರಿಯೆ, ಒಮ್ಮೆ ಆಗುವ ಘಟನೆ ಅಲ್ಲ. ಅದು ಒಂದು ಸ್ಫೋಟ ಅಲ್ಲ, ಬದಲಿಗೆ ಅದು ಕ್ರಮೇಣವಾಗಿ ಆಗುವ ಬದಲಾವಣೆ.

ನಾವು 2012ರಲ್ಲಿ, ಈಗಾಗಲೇ ಪ್ರಾರಂಭವಾಗಿರುವ ಪ್ರಕ್ರಿಯೆಗಳು ಮುಂದುವರಿಯುವುದನ್ನು ನೋಡುತ್ತೇವೆ. ಈ ವರ್ಷದಲ್ಲಿ ಹೆಚ್ಚು ಮತ್ತು ಉನ್ನತ ಮಟ್ಟದ ಜಾಗೃತಿಗಳು ಉಂಟಾಗುತ್ತದೆ. ವಾಸ್ತವಗಳು ಇನ್ನೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಪ್ರತಿಭಟನೆಗಳು ಹೆಚ್ಚಾಗುತ್ತವೆ. ಪ್ರಜ್ಞಾ ವಲಯದಲ್ಲಿ ಬಹಳಷ್ಟು ಮಹತ್ತರ ಬದಲಾವಣೆಗಳು ಉಂಟಾಗುತ್ತವೆ. ಎಲ್ಲ ಮಟ್ಟಗಳಲ್ಲಿ ಬಹಳಷ್ಟು ಪ್ರಾರಂಭಗಳು ಮೊದಲಾಗುತ್ತವೆ. ಪ್ರಳಯ, ಬದಲಾವಣೆ, ಮುಂದುವರೆಯುತ್ತದೆ.

ಜಾಗೃತಿ ಮತ್ತು ವಿಸ್ತಾರಗೊಂಡ ಪ್ರಜ್ಞೆಯೊಂದಿಗೆ, ನಾವು ಹೊಸಯುಗದ ವಾಸ್ತವಗಳನ್ನು ಗ್ರಹಿಸುತ್ತೇವೆ. ಹೊಸಯುಗ ಈಗಾಗಲೇ ಪ್ರಾರಂಭವಾಗಿದೆ ಮತ್ತು ಅದು ತನ್ನ ಪಾಲನೆಯ ಮತ್ತು ಪ್ರೀತಿಯ ಹಸ್ತವನ್ನು ಚಾಚಿ ನಮ್ಮನ್ನು ತನ್ನ ಮಡಿಲಿಗೆ ನಿಧಾನವಾಗಿ ಸೇರಿಸಿಕೊಳ್ಳುತ್ತಿದೆ. ನಮ್ಮನ್ನು ನಾವು ಆಧ್ಯಾತ್ಮಿಕವಾಗಿ ಪರಿವರ್ತಿಸಿಕೊಂಡು, ಶಾಂತಿ ಮತ್ತು ಪರಿಪೂರ್ಣತೆಯಿಂದ ಬದುಕಲು ನಮಗೆ ವಿಶ್ವ ಅವಕಾಶಗಳನ್ನು ಒದಗಿಸುವುದನ್ನು ನಾವು ಕಾಣುತ್ತೇವೆ. ಮತ್ತು ನಾವು, ಜಾಗೃತಗೊಂಡಿರುವ ವಿವೇಕದಿಂದ, ಪರಿವರ್ತನೆಯನ್ನು ಮತ್ತು ಹೊಸಯುಗದ ಜೀವನವನ್ನು ಆಯ್ಕೆಮಾಡುತ್ತೇವೆ.

2012ರ ಅಂತ್ಯದಲ್ಲಿ ಅನೇಕ ಘಟನೆಗಳು ಸಂಭವಿಸುವ ನಿರೀಕ್ಷೆಯಿದೆ. ಭಾರಿ ವಿನಾಶದ ಸಾಧ್ಯತೆಯ ಬಗ್ಗೆ ಬಹಳಷ್ಟು ಭಯ ಹಬ್ಬಿದೆ. ಕೆಲವು ಘಟನೆಗಳು ಖಚಿತವಾಗಿ ಸಂಭವಿಸುತ್ತವೆ. ಆದರೆ ವಿನಾಶದ ಬಗ್ಗೆ ನಾವು ಭಯಪಡದಿರೋಣ. ನಾವು ಪರಿವರ್ತನೆಗೊಂಡು ಹೊಸಯುಗವನ್ನು ಆಯ್ಕೆಮಾಡಿದರೆ, ನಾವು ಕಷ್ಟಗಳಿಂದ ಪಾರಾಗುತ್ತೇವೆ. ಅಧ್ಯಾತ್ಮೀಕರಣ, ಭವಿಷ್ಯಕ್ಕೆ ಇರುವ ರೈಲು. ನಾವು ಧ್ಯಾನ ಮಾಡಿದರೆ, ನಮಗೆ ಹೆಚ್ಚು ಅರ್ಥವಾಗುತ್ತದೆ. ಜ್ಞಾನ ನಮಗೆ ವಿವೇಕ ಮತ್ತು ಧೈರ್ಯಗಳನ್ನು ತರುತ್ತದೆ. ತಿಳಿದುಕೊಳ್ಳಲು, ಅಧಿಕಾರಯುತವಾಗಿ ಹೇಳಬಲ್ಲವರಾಗಲು ಮತ್ತು ನಮ್ಮ ಭವಿಷ್ಯಗಳನ್ನು ಸೃಷ್ಟಿಸಿಕೊಳ್ಳಲು, ಧ್ಯಾನ ಒಂದು ಅವಕಾಶ. ನಾವು ನಮಗಾಗಿ ಮತ್ತು ಇಡೀ ಪ್ರಪಂಚಕ್ಕಾಗಿ ಭವಿಷ್ಯಗಳನ್ನು ಸೃಷ್ಟಿಸುತ್ತೇವೆ. ನಾವು ಸುತ್ತಲೂ ನೋಡಿದಾಗ, ಅನೇಕ ಜನರು, ಧ್ಯಾನ ತೆಗೆದುಕೊಳ್ಳುತ್ತಿರುವುದನ್ನು ಕಾಣುತ್ತೇವೆ. ಅನೇಕ ಜನರು ತಮಗೆ ಅರಿವಿಲ್ಲದೆಯೇ, ಭವಿಷ್ಯಗಳನ್ನು ಸೃಷ್ಟಿಸುವುದಕ್ಕಾಗಿ ಈಗಾಗಲೇ ಕೆಲಸ ಮಾಡುತ್ತಿದ್ದಾರೆ.

ಅನೇಕ ಬೆಳಕಿನ ಕಾರ್ಯಕರ್ತರು ಬೆಳಕನ್ನು ಚಾನಲ್ ಮಾಡುತ್ತಿದ್ದಾರೆ ಮತ್ತು ಹರಡುತ್ತಿದ್ದಾರೆ. ಈ ಸೃಷ್ಟಿಗೆ ಕಾರಣವಾಗಿರುವ, ಭೌತಿಕವಲ್ಲದ ಈ ಸೂಕ್ಷ್ಮಾತಿಸೂಕ್ಷ್ಮ ಬೆಳಕು, ಪ್ರೀತಿ, ಶಾಂತಿ ಮತ್ತು ಅತ್ಯದ್ಭುತವಾದ ಬುದ್ಧಿಮತ್ತೆಯನ್ನು ಹೊಂದಿದೆ. ಮಹತ್ತರವಾದ ವಿವೇಕವನ್ನು ಹೊಂದಿದೆ. ಈ ಬೆಳಕು ಹರಡಿದಾಗ, ಅದು ಈ ಭೂಮಿಯ ಮೇಲಿನ ಎಲ್ಲರಿಗೂ ಮತ್ತು ಎಲ್ಲದಕ್ಕೂ ತಲುಪುತ್ತದೆ. ಜನತೆ, ಪ್ರಕೃತಿ ಮತ್ತು ಎಲ್ಲವೂ ಬೆಳಕನ್ನು ಸ್ವೀಕರಿಸುತ್ತವೆ ಮತ್ತು ತಾವು ಹೊಸಯುಗಕ್ಕೆ ಬದಲಾಗುವ ಘಟ್ಟದಲ್ಲಿದ್ದೇವೆ ಎಂಬುದನ್ನು ಅರಿಯುತ್ತವೆ ಮತ್ತು ಸಿದ್ಧವಾಗುತ್ತವೆ.

2012ರಲ್ಲಿ, ಜನರು ಬೆಳಕಿನ ಬಗ್ಗೆ ಹೆಚ್ಚು ತಿಳಿದುಕೊಳ್ಳುತ್ತಾರೆ, ಬೆಳಕನ್ನು ಅನುಭವಿಸುತ್ತಾರೆ ಮತ್ತು ಪರಿವರ್ತನೆ ಹೊಂದುತ್ತಾರೆ. ನಾವು ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು 2012ರಲ್ಲಿ ಪ್ರಾರಂಭಿಸಿದೆವು. ಅನೇಕರು ಬೆಳಕನ್ನು ಪ್ರತಿದಿನ ಚಾನಲ್ ಮಾಡುತ್ತಿದ್ದಾರೆ. ನಾವು ಶಾಲೆಗಳೊಂದಿಗೆ ಕೆಲಸ ಪ್ರಾರಂಭಿಸಿದೆವು. ಈವರೆಗೆ 18 ಲಕ್ಷಕ್ಕೂ ಹೆಚ್ಚು ಮಕ್ಕಳು ಬೆಳಕನ್ನು ಚಾನಲ್ ಮಾಡಿದ್ದಾರೆ ಮತ್ತು ಪ್ರತಿದಿನ ಲಕ್ಷಾಂತರ ಮಕ್ಕಳು ಬೆಳಕನ್ನು ಚಾನಲ್ ಮಾಡುತ್ತಿದ್ದಾರೆ. ಬೆಳಕನ್ನು ಚಾನಲ್ ಮಾಡಲಾರಂಭಿಸಿದ ಮೇಲೆ ಜನರ ಜೀವನದಲ್ಲಿ ಮತ್ತು ಪರಿಸರದಲ್ಲಿ ಪವಾಡ ಸದೃಶವಾದ ಬದಲಾವಣೆಗಳು ಕಂಡುಬರುತ್ತಿವೆ.

ಬೆಳಕು ನಮ್ಮ ಭರವಸೆ. ನಮ್ಮ ಶಕ್ತಿ. ನಮ್ಮ ಭವಿಷ್ಯ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಭಾರತ.
✆ (080) 2846 5280, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ನವೆಂಬರ್ 2011 – ಬೆಂಗಳೂರು ಪುಸ್ತಕೋತ್ಸವದಲ್ಲಿ ನಮ್ಮ ಸ್ಟಾಲ್

### ಸುದ್ದಿ-ಸೂಚನೆ

- 10-12-2011ರ ಚಂದ್ರಗ್ರಹಣದಂದು ತಪೋನಗರ ನಿವಾಸಿಗಳು ತಪೋನಗರದಲ್ಲಿ ಸೇರಿ, ಗ್ರಹಣದ ಚೈತನ್ಯಗಳನ್ನು ಇಡೀ ಪ್ರಪಂಚಕ್ಕೆ ಚಾನಲ್ ಮಾಡಿದರು.
- 25-12-2011 ರಂದು ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ನಡೆದ ವಿಶೇಷ ಧ್ಯಾನದಲ್ಲಿ ನೂರಾರು ಧ್ಯಾನಿಗಳು ಭಾಗವಹಿಸಿದ್ದರು.
- ಶಂಬಲ ಗ್ರೂಪ್‌ನ ಹೊಸ ಬ್ಯಾಚ್ 8-1-2012 ರಿಂದ ಆರಂಭವಾಗುತ್ತದೆ.
- ಕಳೆದ ಮೂರು ತಿಂಗಳಿನಿಂದ ಮೂರು ಗಂಟೆಗಳ ಕಾಲ ಧ್ಯಾನ ಮಾಡುತ್ತಿರುವವರು 15-1-2012 ರಂದು ಆರಂಭವಾಗುವ 'ರಾ-ಗ್ರೂಪ್'ಗೆ ಸೇರಬಹುದು.
- 5-2-2012 ರಂದು ನಡೆಯುವ ಅಮರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವವರು, 31-1-2012 ರೊಳಗೆ ತಮ್ಮ ಹೆಸರನ್ನು ನಮ್ಮ ಆಫೀಸಿನಲ್ಲಿ ನೋಂದಾಯಿಸಬೇಕಾಗಿ ವಿನಂತಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಭಾನು | ಶುಕ್ಲ ಅಷ್ಟಮಿ |
| 03 | ಮಂಗಳ | ಶುಕ್ಲ ದಶಮಿ |
| 08 | ಸೋಮ | ಪೂರ್ಣಿಮಾ |
| 15 | ಭಾನು | ಉತ್ತರಾಯಣ ಆರಂಭ ಮಕರ ಸಂಕ್ರಾಂತಿ |
| 16 | ಸೋಮ | ಕೃಷ್ಣಾಷ್ಟಮಿ |
| 21 | ಶನಿ | ಮಾಸ ಶಿವರಾತ್ರಿ |
| 23 | ಸೋಮ | ಅಮಾವಾಸ್ಯೆ |
| 30 | ಸೋಮ | ರಥಸಪ್ತಮಿ |
| 31 | ಮಂಗಳ | ಶುಕ್ಲಾಷ್ಟಮಿ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ವಿಶೇಷ ಧ್ಯಾನ & ಲೈಟ್ ಚಾನಲಿಂಗ್:<br>ಮಧ್ಯಾಹ್ನ 12-1 |
| 08-01-12 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 15-01-12 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |

**2012 ನೇ ವರ್ಷದ ಡೆಸ್ಕ್ ಕ್ಯಾಲೆಂಡರುಗಳು ಲಭ್ಯವಿದೆ. ಇದು ಶ್ರೇಷ್ಠ ಚಿತ್ರಕಾರರೊಬ್ಬರು ರಚಿಸಿದ ಮಾನಸ ಮತ್ತು ಅಂತರ್ ಮಾನಸದ ಸ್ಕೆಚ್‌ಗಳನ್ನೊಳಗೊಂಡಿದೆ.**

**ಈಗ www.lightagemasters.com ವೆಬ್‌ಸೈಟ್ ಮೂಲಕ ಹೊರದೇಶಗಳಲ್ಲಿ ವಾಸಿಸುವ ನಮ್ಮ ಸಾಧಕರು ತಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಆನ್‌ಲೈನ್‌ನಲ್ಲಿ ಹಣ ಕಳುಹಿಸುವ ವ್ಯವಸ್ಥೆಯನ್ನು ಒದಗಿಸಲಾಗಿದೆ.**

**14-1-2012 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.**

**ಈಗ ಗುರೂಜಿಯವರು 'Speaking Tree' ಯ ಮಾಸ್ಟರ್‌ಗಳ ಸಾಲಿಗೆ ಸೇರ್ಪಡೆಯಾಗಿದ್ದಾರೆ. ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.**

**ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.**

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- 18 ಲಕ್ಷಕ್ಕೂ ಹೆಚ್ಚು ಮಕ್ಕಳು ಕನಿಷ್ಠ ಪಕ್ಷ ಒಮ್ಮೆಯಾದರೂ ಲೈಟ್ ಚಾನಲ್ ಮಾಡಿರುವುದು ಮತ್ತು 3 ಲಕ್ಷಕ್ಕೂ ಹೆಚ್ಚು ಮಕ್ಕಳು ಸುಮಾರು 600 ಶಾಲೆಗಳಲ್ಲಿ ಪ್ರತಿದಿನದ ಶಾಲಾಪ್ರಾರ್ಥನೆಯ ಸಮಯದಲ್ಲಿ ಲೈಟ್ ಚಾನಲ್ ಮಾಡುತ್ತಿದ್ದಾರೆ!
- ಈ ಪರಿಶುದ್ಧ ಆತ್ಮಗಳು ಮಾಡಿದ ಲೈಟ್ ಚಾನಲ್ ತನ್ನ ಪ್ರಭಾವ ಬೀರುತ್ತಿದೆ. ಇದನ್ನು ವೈಯಕ್ತಿಕ ಮಟ್ಟದಲ್ಲಿ ಮತ್ತು ಸಾಮೂಹಿಕ ಮಟ್ಟದಲ್ಲಿ ಹಾಗೂ ಶಾಲೆಗಳಲ್ಲಿ ಗಮನಾರ್ಹವಾಗಿ ಅನುಭವಿಸುತ್ತಿದ್ದೇವೆ. ಜಾಗತಿಕ ಮಟ್ಟದಲ್ಲಾಗುವ ಇದರ ಪ್ರಭಾವವನ್ನು ಸ್ಪಷ್ಟವಾಗಿ ತಿಳಿಯುವುದು ಕಷ್ಟ. ಆದರೆ ಬೆಳಕು ಹೆಚ್ಚುಹೆಚ್ಚು ಜನರನ್ನು ತಲುಪಿದಂತೆ, ಜಾಗತಿಕ ಮಟ್ಟದಲ್ಲಿ ಇದು ಸ್ವಾಭಾವಿಕವಾಗಿ ಪ್ರಭಾವ ಬೀರುತ್ತದೆ.
- ಮಹರ್ಷಿ ಅಮರರ ಹುಟ್ಟುಹಬ್ಬವಾದ ಫೆಬ್ರವರಿ 1ರಂದು ಸಂಜೆ 6ಗಂಟೆಗೆ ತಪೋನಗರಕ್ಕೆ ಮಾನಸಿಕ ಸಂಪರ್ಕ ಕಲ್ಪಿಸಿಕೊಂಡು 7 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಬೇಕಾಗಿ ವಿನಂತಿ. ■

## ಲೈಟ್ ಚಾನಲಿಂಗ್ ಅನುಭವಗಳು

ನಾನು ಮತ್ತು ನನ್ನ ಗೆಳತಿಯ ನಡುವೆ ಜಗಳವಾಗಿ, ಅವಳು ನನ್ನೊಂದಿಗೆ ಮಾತನಾಡುವುದನ್ನು ನಿಲ್ಲಿಸಿದಳು. ನಾನು ಆಕೆಗೆ ಬೆಳಕನ್ನು ಕಳುಹಿಸಿದೆ. ಅದರ ನಂತರ ಆಕೆ ನನ್ನೊಡನೆ ಮಾತನಾಡಲಾರಂಭಿಸಿದಳು.

– ಪಿ. ಎಲ್. ವಿಶಾಲಾಕ್ಷಿ, ಎನ್.ಎಸ್.ಎಸ್. ಶಿಬಿರ, ಚೆನ್ನೈ

ಒಮ್ಮೆ ನನ್ನ ಮನೆಯಿಂದ ಫೋನ್ ಕರೆ ಬರದಿದ್ದುದರಿಂದ ನಾನು ಆತಂಕಗೊಳಗಾಗಿದ್ದೆ. ನಂತರ ನಾನು ಲೈಟ್ ಚಾನಲ್ ಮಾಡಿದೆ. ಅದಾದ ಸ್ವಲ್ಪ ಹೊತ್ತಿನಲ್ಲೇ ನನ್ನ ತಾಯಿಯಿಂದ ಕರೆ ಬಂದಿತು!

ಎಂ. ರೋಹಿಣಿ, ಎನ್.ಎಸ್.ಎಸ್. ಶಿಬಿರ, ಚೆನ್ನೈ

ರಾತ್ರಿ 10ಗಂಟೆಯ ಸಮಯದಲ್ಲಿ, 7 ವರ್ಷದ ಹುಡುಗಿಯೊಬ್ಬಳಿಗೆ ಇದ್ದಕ್ಕಿದ್ದಂತೆಯೇ ಹೊಟ್ಟೆನೋವು ಆರಂಭವಾಯಿತು. ಮೇಲ್ವಿಚಾರಕಿ ಔಷಧವನ್ನು ನೀಡಿದರೂ ನೋವು ಪರಿಹಾರವಾಗಲಿಲ್ಲ. ಆಗ ನಾನು ಮೇಲ್ವಿಚಾರಕಿಯೊಂದಿಗೆ ಮಾತನಾಡಿ, ಆ ಹುಡುಗಿಗೆ ಬೆಳಕನ್ನು ಚಾನಲ್ ಮಾಡುವಂತೆ ತಿಳಿಸಿದೆ. ಉಳಿದ ಮಕ್ಕಳೂ ಜೊತೆಗೂಡಿ ಎಲ್ಲರೂ ಮನಃಪೂರ್ವಕವಾಗಿ ಲೈಟ್ ಚಾನಲ್ ಮಾಡಿದೆವು. 10 ನಿಮಿಷದ ನಂತರ ಆಕೆ ಯಾವ ನೋವೂ ಇಲ್ಲದೆ ಶಾಂತವಾಗಿ ನಿದ್ರಿಸಿದಳು. ಮಕ್ಕಳು ತಮ್ಮ ಜೀವನದಲ್ಲಿ ಲೈಟ್ ಚಾನಲಿಂಗ್ ಅಳವಡಿಸಿಕೊಂಡು ಅದರ ಸಹಾಯ ಪಡೆಯುತ್ತಿರುವುದು ನನಗೊಂದು ಸಂತೋಷದ ವಿಷಯವಾಗಿದೆ.

– ಸುಗುಣ, ನಿವಾಸಿ, ಚೆಶೈರ್ ಹೋಮ್ ಫಾರ್ ಡಿಸೇಬಲ್ಡ್, ಬೆಂಗಳೂರು

## ತಪೋನಗರ ಡೈರಿ

**ಸೀಮಾ ಅಲ್‌ವೇಲ್ ಸೋಮಯಾಜಿ; ಅನು: ಪಾಂಡುರಂಗ**

ತಪೋನಗರ ಋಷಿಗಳ ಒಂದು ಯೋಜನೆಯಾಗಿದೆ. ಇಲ್ಲಿ ನಾವು ಋಷಿಗಳ ಸಾನಿಧ್ಯದಲ್ಲಿ ಜೀವಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಇದು ಕೇವಲ ಭೌತಿಕವಾಗಿ ಜೀವಿಸುವುದಷ್ಟೇ ಅಲ್ಲದೆ ಋಷಿಗಳ ಉನ್ನತ ತರಂಗಗಳಿಗೆ ಶ್ರುತಿಗೊಳ್ಳುವುದಾಗಿದೆ. ಈ ಯೋಜನೆ, ಈಗಿನ ಗೊಂದಲಮಯ ಪ್ರಪಂಚದಲ್ಲಿದ್ದುಕೊಂಡೇ, ಆಧ್ಯಾತ್ಮಿಕ ಸಮುದಾಯದಲ್ಲಿ ವಾಸಿಸಲು ಇಚ್ಛಿಪಡುವವರಿಗೆ ಸ್ಥಳಾವಕಾಶ ಸೃಷ್ಟಿಸುವುದಾಗಿದೆ.

ಇಲ್ಲಿಯ ನಿವಾಸಿಗಳು ಈ ಯೋಜನೆಯಲ್ಲಿ ಸಹಭಾಗಿಗಳಾಗಿದ್ದಾರೆ. ಅವರೆಲ್ಲರೂ ಇಲ್ಲಿರುವ ಚೈತನ್ಯಗಳೊಂದಿಗೆ ಶ್ರುತಿಗೊಳ್ಳುವುದರ ಜೊತೆಗೆ ಒಳ್ಳೆಯತನದಿಂದ ಬದುಕಲು ಪ್ರಯತ್ನಿಸುತ್ತಿದ್ದಾರೆ. ಸಫಲತೆ ಮತ್ತು ಅಸಫಲತೆಗಳು ಪಯಣದ ಭಾಗಗಳು. ಮಾನವ ಮಿತಿಗಳು ಮತ್ತು ಭಯಾಧಾರಿತ ಭಾವುಕತೆಗಳನ್ನು ಬಿಟ್ಟುಕೊಡುವ ಅವರ ದೃಢ ಸಂಕಲ್ಪಕ್ಕೆ ಮಾನಸಿ ವಲಯ ಒತ್ತುಕೊಡುತ್ತದೆ. ಆದರೂ ಶೀಘ್ರವಾಗಿ ಉದಯಿಸುತ್ತಿರುವ ಬೆಳಕಿನ ಯುಗದ ಜೊತೆಗೂಡಿ ಮುನ್ನಡೆಯುವುದು ಒಂದು ಸವಾಲಾಗಿದೆ.

ತಪೋನಗರ ನಿವಾಸಿ ಎಂದರೆ ಆಧ್ಯಾತ್ಮಿಕವಾಗಿ ಬೆಳೆಯುವ ನಮ್ಮ ಪ್ರಯತ್ನಗಳನ್ನು ಎಚ್ಚರದಿಂದ ಪರಿಶೀಲಿಸಿಕೊಳ್ಳುವುದೂ ಆಗಿದೆ. ಇದು ವ್ಯಕ್ತಿಯ ಇಚ್ಛಾಸ್ವಾತಂತ್ರ್ಯವನ್ನು ಕಡೆಗಣಿಸದೆ, ಸಾಮೂಹಿಕ ಒಳಿತಿನ ಮೌಲ್ಯವನ್ನು ಅರಿತು, ಸಾಕಾರಗೊಳಿಸುವುದಾಗಿದೆ ಮತ್ತು ಸರಿದೂಗಿಸುವುದಾಗಿದೆ. ಇದೇ ಒಮ್ಮತ.

ಮಾನವರಲ್ಲಿ ಕಲಿಯುಗದ ಸಂಕೋಲೆಗಳು ಇನ್ನೂ ಇದ್ದರೂ, ಕೆಲವರು ತಮ್ಮಲ್ಲಿ ಮತ್ತು ತಪೋನಗರದಲ್ಲಿ ಬೆಳಕಿನ ಯುಗವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ. ಯಾರನ್ನೂ ತೀರ್ಮಾನಿಸದೆ ಸಾಮರಸ್ಯದಿಂದಿರುವುದು, ಪ್ರತಿರೋಧ ತೋರಿಸದೆ ಪ್ರೀತಿಸುವುದು ಮತ್ತು ನಮ್ಮೆಲ್ಲ ಭಿನ್ನಾಭಿಪ್ರಾಯಗಳನ್ನು ದೈವೀ ಚೈತನ್ಯಗಳಿಗೆ ಒಪ್ಪಿಸಿ ಅವುಗಳ ತೀರ್ಮಾನಕ್ಕೆ ಬಿಡುವುದು, ಈಗಿನ ಮಾಪನಗಳಾಗುತ್ತಿವೆ. ತಪೋನಗರವಾಸಿ ಆಗುವುದೆಂದರೆ ತಪೋನಗರದಲ್ಲಿ ವಾಸವಾಗಿರುವುದಷ್ಟೇ ಅಲ್ಲ, ಎಲ್ಲಕಡೆಯೂ ತಪೋನಗರದಂತೆ ಬದುಕಬೇಕು. ನಾವೆಲ್ಲರೂ ತಪೋನಗರದಂತೆ ಬದುಕಲು ಪ್ರಯತ್ನಿಸುತ್ತಿದ್ದೇವೆ, ಇಲ್ಲಿ ನೆಲೆಸಿರುವವರು ಕೂಡ. ನವೆಂಬರ್ ತಿಂಗಳ ಕೊನೆಯಲ್ಲಿ ಸಂಭವಿಸಿದ ಗ್ರಹಣ, ತಪೋನಗರದ ಯೋಜನೆಯನ್ನು ಯಶಸ್ವಿಗೊಳಿಸಲು ಮಾಡಿರುವ ನಮ್ಮ ನಿರ್ಧಾರಕ್ಕೆ ಪುಷ್ಟಿಕೊಟ್ಟಿದೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

### 6–11–2011

ನಾನು ಈ ದಿನ ಕೆಲವರಿಗೆ ದೀಕ್ಷೆ ನೀಡಿದೆ. ದೀಕ್ಷೆ ಕೊಡುವ ಕಾಲದಲ್ಲಿ ಋಷಿಗಳು ನಮ್ಮ ಮೂಲಕ ಚೈತನ್ಯಗಳನ್ನು ಹರಿಸುತ್ತಾರೆ. ಈ ಚೈತನ್ಯಗಳು ದೀಕ್ಷೆ ಪಡೆದುಕೊಂಡವರೊಂದಿಗೆ ನಂತರದ 24 ಘಂಟೆವರೆಗೆ ಇದ್ದು ಸಕ್ರಿಯವಾಗಿ ಕೆಲಸ ಮಾಡುತ್ತಿರುತ್ತವೆ. 24 ಘಂಟೆಗಳ ನಂತರ ಇವು ಒಂದು ರೀತಿ ಸುಪ್ತ ಅವಸ್ಥೆಯಲ್ಲಿರುತ್ತವೆ. ಈ ಚೈತನ್ಯಗಳನ್ನು ನಾವು ಭೌತಿಕ ನೆಲೆಯಲ್ಲಿ ಅನುಭವಿಸುವುದಿಲ್ಲ, ಏಕೆಂದರೆ ಅವು ಬೇರೆ ಹಂತದಲ್ಲಿರುತ್ತವೆ.

ಇದು ಮೊದಲ ಬಾರಿ ಅಲ್ಲ ಅಥವಾ ಆಕಸ್ಮಿಕವಾಗಿಯೂ ಅಲ್ಲ, ಆದರೆ ದೈವೀ ಯೋಜನೆಯಂತೆ ನಾವೆಲ್ಲ ಋಷಿಗಳ ಸುತ್ತ ನೆರೆದಿದ್ದೇವೆ. ಅವರು ನಮ್ಮ ಮೂಲಕ ಹೊಸ ಚೈತನ್ಯಗಳನ್ನು ಬಿಡುಗಡೆಗೊಳಿಸುತ್ತಾರೆಂಬ ವಿಷಯಕ್ಕೆ ನಾವೆಲ್ಲ ಸಂತೋಷಪಡೋಣ.

ಆಧ್ಯಾತ್ಮಿಕ ಪ್ರಯಾಣ ಎಂಬುದು ಒಂದು ಬಲೂನಿನಲ್ಲಿ ಪ್ರಯಾಣ ಮಾಡಿದಂತೆ. ಬಲೂನು ಮೇಲೇರಬೇಕಾದರೆ ನಾವು ಹೆಚ್ಚು ಹೊರೆಯನ್ನು ಹೊಂದಿರುವಂತಿಲ್ಲ. ಅನಗತ್ಯ ಹೊರೆಯನ್ನು ಅಂದರೆ, ವಸ್ತುಗಳು, ಜನರು, ಸ್ಥಳಗಳು, ತೀವ್ರಾಸಕ್ತಿಗಳು ಮತ್ತು ಹವ್ಯಾಸಗಳಿಗಿರುವ ಮೋಹವನ್ನು ಕಿತ್ತೊಗೆಯಬೇಕು. ನಾವು ಮೊದಲು ಅನಗತ್ಯ ಹೊರೆಯನ್ನು ಗುರುತಿಸಿ, ಅದರಿಂದ ನಮ್ಮನ್ನು ಬೇರ್ಪಡಿಸಬೇಕು. ನಮ್ಮ ತೀವ್ರಾಸಕ್ತಿಗಳು ಮತ್ತು ಹವ್ಯಾಸಗಳು ನಮ್ಮನ್ನು ವಿಚಲನೆಗೊಳಿಸುವಂತಿದ್ದರೆ, ಮೊದಲು ಅವುಗಳನ್ನು ಬಿಟ್ಟುಬಿಡಬೇಕು. ಅದು ಬಹಳ ದೊಡ್ಡ ತ್ಯಾಗವೇನಲ್ಲ.

ತೀಕ್ಷ್ಣವಾದ ಭಾವಾವೇಶಗಳು ಉನ್ನತ ಅನುಭವಗಳಿಗೆ ಅಡಚಣೆಗಳಾಗುತ್ತವೆ. ನಾವು ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮಾಡಬೇಕು. ಅವನ್ನು ಮೊದಲು ಉತ್ತಮೀಕರಿಸಬೇಕು ಮತ್ತು ಸಕಾರಗೊಳಿಸಬೇಕು. ಅದಕ್ಕಾಗಿ ನೀವು ಬೆಳಕನ್ನು ಅನುಭವಿಸಿ, ಸಂಗೀತವನ್ನು ಕೇಳಿ ಎಂದು ನಾನು ಸಲಹೆ ನೀಡುತ್ತೇನೆ.

ನಮ್ಮ ಸುತ್ತ ಬೇರೆಬೇರೆ ಹಂತಗಳಲ್ಲಿ ನಡೆಯುವಂತಹ ಭ್ರಷ್ಟಾಚಾರ, ಹಿಂಸೆ, ಅನ್ಯಾಯಗಳ ಬಗ್ಗೆ ನಾವು ಏನೂ ಮಾಡಲಾಗುವುದಿಲ್ಲ. ನಾವು ಬೆಳಕನ್ನು ಕಳುಹಿಸಬಹುದು, ನಮ್ಮನ್ನು ನಾವು ಮತ್ತು ಪ್ರಪಂಚವನ್ನು ಹೀಲ್ ಮಾಡಬಹುದು. ಇನ್ನೊಂದು ಹಂತದಲ್ಲಿನ ನಮ್ಮ ಸಾಮರ್ಥ್ಯದ ಬಗ್ಗೆ ಅರಿವಿರಬೇಕು, ಅದನ್ನು ಬಳಸಿಕೊಂಡು ನಮ್ಮ ಜೀವನ ಮತ್ತು ಈ ಭೂಮಿಯ ಮೇಲಿನ ಜೀವನವನ್ನು ಹೆಚ್ಚು ಸುಖಕರ ಮತ್ತು ಶಾಂತಿಯಿಂದಿರುವಂತೆ ಮಾಡೋಣ.

ಮಾಯನ್ನರು ಭವಿಷ್ಯ ನುಡಿದಂತೆ ಪ್ರಜ್ಞೆಯಲ್ಲಿ ಕೊನೆಯ ಬದಲಾವಣೆ ಅಕ್ಟೋಬರ್ 28ರಂದು ಆಯಿತು. ಬದಲಾವಣೆ ಒಮ್ಮೆಲೆ ಅಗುವಂತಹ ಘಟನೆಯಲ್ಲ. ಇದು ಒಂದು ಕಾಲದ ಅವಧಿಯಲ್ಲಿ ಸಂಭವಿಸುವ ಘಟನೆಗಳ ಸರಮಾಲೆ. ಬದಲಾವಣೆ ಒಂದು ಅವಕಾಶ ಕೂಡಾ. ಅದನ್ನು ಬಳಸಿಕೊಳ್ಳುವುದು ನಮಗೆ ಬಿಟ್ಟಿದ್ದು. ನೀವು ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಉಳ್ಳವರು. ಈಗ ಬದಲಾವಣೆಯ ಪ್ರಕ್ರಿಯೆಯನ್ನು ಬಲಗೊಳಿಸುವ ಹೊಸ ಚೈತನ್ಯಗಳು ದೊರಕುವ ಅವಕಾಶಗಳು ಹೆಚ್ಚಾಗಿವೆ. ಸದ್ಯದಲ್ಲೇ ಒಂದು ದೊಡ್ಡ ಬದಲಾವಣೆ ಆಗುವುದರಲ್ಲಿದೆ.

ಕ್ರಮಬದ್ಧವಾಗಿ ಧ್ಯಾನಾಭ್ಯಾಸಗಳನ್ನು ಮಾಡಿದ ಮೇಲೂ, ರಕ್ಷಾಕವಚಗಳಿದ್ದರೂ ಕೆಲವು ಸಲ ಜನರು ತಾವು ಅಶಕ್ತರು, ಚೈತನ್ಯವಿಲ್ಲದವರೆಂದು ಹೇಳುತ್ತಾರೆ. ಸಹಾಯವನ್ನು ಕೇಳದೇ ಇದ್ದಾಗ ಮತ್ತು ಅನಗತ್ಯವಾಗಿ ಸ್ವಇಚ್ಛೆಯಿಂದ ಕಾರ್ಯತತ್ಪರರಾದರೆ, ನಾವು ಇನ್ನೊಬ್ಬರ ಕರ್ಮಗಳೊಂದಿಗೆ ಮಧ್ಯಪ್ರವೇಶ ಮಾಡಿದಂತಾಗುತ್ತದೆ. ಆಗ ನೀವು ಸಹಜವಾಗಿಯೇ ಅವರ ಕರ್ಮಗಳಲ್ಲಿ ಸ್ವಲ್ಪ ಭಾಗ ತೆಗೆದುಕೊಳ್ಳುತ್ತೀರಿ ಮತ್ತು ನಿಮ್ಮ ಚೈತನ್ಯಗಳನ್ನು ಅದಕ್ಕಾಗಿ ಬಳಸಿಕೊಳ್ಳಬೇಕಾಗುತ್ತದೆ. ನಾವು ವಿವೇಚನಾಯುತರಾಗಿರಬೇಕು. ನೀವು ಯಾರಿಗಾದರೂ ಸಹಾಯ ಮಾಡಬಯಸಿದರೆ, ನಿಮಗೆ ಯಾವುದೇ ಅನುಮಾನವಿದ್ದರೆ, ನನ್ನೊಂದಿಗೆ ಪರೀಕ್ಷಿಸಿಕೊಳ್ಳಿ.

ಋಷಿಗಳನ್ನು ಸಂಪರ್ಕಿಸಲು ಅತ್ಯಂತ ಸರಳವಾದ ತಂತ್ರವೆಂದರೆ, ನಿಮ್ಮ ಶರೀರ ವ್ಯವಸ್ಥೆಯಲ್ಲಿ ಒಬ್ಬ ಋಷಿಯನ್ನು ಒಂದು ಪ್ರಜ್ವಲಿಸುವ ಬೆಳಕಿನ ಗೋಳದ ರೂಪದಲ್ಲಿ ಭಾವಿಸಿಕೊಳ್ಳಿ, ಅವರೊಂದಿಗೆ ಮಾತನಾಡಲು ಪ್ರಯತ್ನಿಸಿ, ನೀವು ಸಂಪರ್ಕ ಪಡೆಯುವಿರಿ.

ನಾವು ಸರಳತೆಯನ್ನು ರೂಢಿಸಿಕೊಳ್ಳಬೇಕು. ಅದಕ್ಕಾಗಿ ನಾವು ಧ್ಯಾನ ಮಾಡಬೇಕು. ಅನೇಕ ಸಲ ನಮ್ಮನ್ನು ನಾವು ಗೊಂದಲಕ್ಕೆ ಗುರಿ ಮಾಡುತ್ತೇವೆ.

### 13–11–2011

ನಾವು ಸಣ್ಣ ಸಂಖ್ಯೆಯಲ್ಲಿದ್ದೇವೆ ಎಂದು ತಿಳಿಯಬೇಡಿ. 1,44,000 ಕೇಂದ್ರಗಳಿಂದ ಲಕ್ಷಗಟ್ಟಲೆ ಜನರು ಈ ಕಾರ್ಯಜಾಲದಲ್ಲಿ ಭಾಗಿಯಾಗಿದ್ದಾರೆ. ನಾವು ಭೌತಿಕ ನೆಲೆಯಲ್ಲಿ ಎಂದೂ ಭೇಟಿಯಾಗುವುದಿಲ್ಲ. ನಾವು ಸಂಪೂರ್ಣವಾಗಿ ಭಿನ್ನ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ನಾವು ಬಹುದೊಡ್ಡ ಮತ್ತು ಮೌನ ಆಂದೋಲನದಲ್ಲಿ ಭಾಗಿಯಾಗಿದ್ದೇವೆ ಎಂಬ ವಿಷಯ ಹೃದಯಸ್ಪರ್ಶಿಯಾಗಿದೆ. ನಾವು ಸೂಕ್ಷ್ಮಮಟ್ಟದಲ್ಲಿ ಕೆಲಸ ಮಾಡುವ ಅಗತ್ಯವಿಲ್ಲ, ಕಾರಣ ಮಾಸ್ಟರ್‌ಗಳು ಆ ಮಟ್ಟದಲ್ಲಿ ಈಗಾಗಲೇ ಕೆಲಸ ಮಾಡುತ್ತಿದ್ದಾರೆ. ನಾವು ಬೆಳಕನ್ನು ಚಾನಲ್ ಮಾಡುವ ಅಗತ್ಯವಿದೆ. ಕೆಲವು ಚೈತನ್ಯಗಳನ್ನು ನಮ್ಮ ಮೂಲಕ ಚಾನಲ್ ಮಾಡಬೇಕಾಗಿರುವುದರಿಂದ ಋಷಿಗಳು ಅವುಗಳನ್ನು ಮೀಸಲಾಗಿಟ್ಟಿದ್ದಾರೆ. ಆ ಚೈತನ್ಯಗಳನ್ನು ಚಾನಲ್ ಮಾಡುವುದಕ್ಕಾಗಿ ನಾವು ತರಬೇತಿ ಪಡೆಯುತ್ತಿದ್ದೇವೆ. ನಮ್ಮ ಈ ಅದ್ಭುತ ಮತ್ತು ನಿರ್ಣಾಯಕ ಪಾತ್ರದ ಬಗ್ಗೆ ಜಾಗೃತರಾಗಿರೋಣ.

ಇತ್ತೀಚೆಗೆ 28–10–2011 ರಂದು ಆದ ಪ್ರಜ್ಞೆಯಲ್ಲಿನ ಬದಲಾವಣೆ ಇನ್ನೂ ಕೆಲಸ ಮಾಡುತ್ತಿದೆ. ಇದರ ಪರಿಣಾಮವನ್ನು ಮಾನವಕುಲ ತಡೆದುಕೊಳ್ಳಲು ಕಷ್ಟವಾಗಿರುವುದರಿಂದ, ಋಷಿಗಳು ಇದನ್ನು ನಿಧಾನವಾಗಿ ಸಂಭವಿಸಲು ಅನುಮತಿಸಿದ್ದಾರೆ. ನಾವು ಸ್ವಲ್ಪ ಹಿಂದೆ ನಿಂತು, ನಿರ್ಮೋಹದಿಂದ ಮತ್ತು ವಸ್ತುನಿಷ್ಠತೆಯಿಂದ ಎಲ್ಲಾ ಕ್ಷೇತ್ರಗಳಲ್ಲಿ ಆಗುತ್ತಿರುವ ಬದಲಾವಣೆಯನ್ನು ಗಮನಿಸಬೇಕು. ತುಂಬ ಹಿತಕರ, ಒಳ್ಳೆಯ, ಕೆಟ್ಟ ಮತ್ತು ಅಸಹ್ಯಕರ ಮುಂತಾದ ಸತ್ಯಗಳು ಎಲ್ಲ ಮಟ್ಟಗಳಲ್ಲಿ ಕಾಣಿಸಿಕೊಳ್ಳಲು ಬದಲಾವಣೆ ಸಹಾಯ ಮಾಡುತ್ತದೆ. ಇದು ನಮಗೆ ಇಂಥಾ ವಿಷಯಗಳನ್ನು ನಿರ್ವಹಿಸಲು, ಎಲ್ಲವನ್ನೂ ಸ್ಪಷ್ಟವಾಗಿ ತೋರಲು ಮತ್ತು ಮುಂದೆ ನಡೆಯಲು ಕೂಡಾ ಸಹಾಯ ಮಾಡುತ್ತದೆ. ಆದರೆ ವ್ಯಕ್ತಿಗಳು ಮತ್ತು ಅಧಿಕಾರದಲ್ಲಿರುವ ಜನರು ಆಯ್ಕೆ ಮಾಡಬೇಕಾಗುತ್ತದೆ. ಬದಲಾವಣೆಯಿಂದ ಬರುವ ಚೈತನ್ಯಗಳು ನಾವು ಆಯ್ಕೆ ಮಾಡಿಕೊಂಡಿರುವ ಮಾರ್ಗವನ್ನು ದೃಢಪಡಿಸುತ್ತವೆ. ಈ ಕಾಲದಲ್ಲಿ ನಮ್ಮನ್ನು ಸಂರಕ್ಷಿಸುವ ಮಾರ್ಗವೆಂದರೆ ಆಧ್ಯಾತ್ಮಿಕ ಮಾರ್ಗ. ಬದಲಾವಣೆ ಎಲ್ಲಾ ಲೆಕ್ಕಾಚಾರಗಳನ್ನು ಮುಗಿಸುವ ಸಮಯ ಕೂಡಾ ಆಗಿದೆ. ಆದರೆ ನಾವು ಅತ್ಯಂತ ಪ್ರಾಮಾಣಿಕರಾಗಿರಬೇಕು ಮತ್ತು ತಪ್ಪುಗಳನ್ನು ಮತ್ತೆ ಮಾಡಬಾರದು. ಈ ಮಹಾನ್ ಬದಲಾವಣೆ, ಒಂದು ಸಾಮಾನ್ಯ ಬದಲಾವಣೆಯಲ್ಲ. ಕತ್ತಲಯುಗದಿಂದ ಬೆಳಕಿನಯುಗಕ್ಕೆ ಬದಲಾಗುವ ಅದ್ಭುತ ಪರಿವರ್ತನೆ ಪ್ರಾರಂಭವಾಗಿದೆ. ಈ ಬದಲಾವಣೆಯೊಂದಿಗೆ, ಬದಲಾವಣೆಯ ವೇಗ ಹೆಚ್ಚಿದೆ.

ಬದಲಾವಣೆಯನ್ನು ನಾವು ಒಪ್ಪಿಕೊಳ್ಳಬೇಕು. ಅದು ಸುಲಭವಲ್ಲ. ಇದರಲ್ಲಿ ಅನೇಕ ವಿಷಯಗಳು, ಅನೇಕ ವಿವರಗಳು ಒಳಗೊಂಡಿವೆ. ನಾವು ಒಪ್ಪಿಕೊಂಡರೆ ಮುಂದಿನ ಯುಗದಲ್ಲಿರುತ್ತೇವೆ. ನಾವು ಆಯ್ಕೆ ಮಾಡಿಕೊಂಡು, ಒಪ್ಪಿಕೊಂಡ ನಂತರ ಏನಾಗುತ್ತದೆ ಎಂಬುದು ನಮಗೆ ಗೊತ್ತಿಲ್ಲ.

ನೀವು ತಪೋನಗರದಲ್ಲಿ ತರಗತಿ ಅಥವಾ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾದರೆ ನಿಮ್ಮ ಹೆಸರನ್ನು ದಯವಿಟ್ಟು ಮುಂಚಿತವಾಗಿಯೇ ನಮ್ಮ

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ಮಾನಸ ಆಫೀಸಿನಲ್ಲಿ ಬೆಳಗ್ಗೆ 10ರಿಂದ ಸಂಜೆ 4 ಘಂಟೆಯೊಳಗೆ ನೊಂದಾಯಿಸಬೇಕು.

ಯಾರಾದರೂ ಹೀಲಿಂಗ್ ಬಯಸಿದರೆ ಮನೋಜ್ ಅವರನ್ನು ಸಂಪರ್ಕಿಸಿ. ಹೀಲಿಂಗ್ ಅನ್ನು ಹಗುರವಾಗಿ ಪರಿಗಣಿಸದಿರಿ. ಅದು ಕೇವಲ ಚೈತನ್ಯಗಳನ್ನು ಪಡೆದುಕೊಂಡು ಕಳುಹಿಸುವುದಲ್ಲ. ನಾವು ಹೀಲಿಂಗ್ ಚೈತನ್ಯಗಳನ್ನು ಕಳುಹಿಸಬಹುದಷ್ಟೆ, ಆದರೆ ಕರ್ಮಗಳನ್ನು ಮುಂದಕ್ಕೆ ಹಾಕುವಂತಹ ವಿಷಯಗಳ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದಿಲ್ಲ. ಅದನ್ನು ಸಂತೋಷಿದೇವಿಗೆ ಒಪ್ಪಿಸಿ, ಆ ದೇವಿಯಿಂದ ಚೈತನ್ಯಗಳನ್ನು ಪಡೆಯಿರಿ. ಕರ್ಮಗಳನ್ನು ಕಡಿಮೆಗೊಳಿಸುವ ಅಥವಾ ಮುಂದಕ್ಕೆ ಹಾಕುವಂತಹ ಕೆಲಸಗಳಲ್ಲಿ ತೊಡಗಿರುವ ಆ ದೇವತೆ ಇದನ್ನು ನಿರ್ವಹಿಸುತ್ತಾಳೆ.

**20–11–2011**

ನೀವು ಪ್ರತಿದಿನ ಬೆಳಕಿನ ಸಾಗರವನ್ನು ಅನುಭವಿಸುವುದನ್ನು ದೀರ್ಘಕಾಲ ಅಭ್ಯಾಸ ಮಾಡಿದರೆ ಯಾವಾಗಲೂ ಆರೋಗ್ಯ, ಶಾಂತಿಯಿಂದ ಇರುವಿರಿ. ಬೆಳಕಿನೊಂದಿಗೆ ಹೊಂದಿಕೊಂಡಿರುವಿರಿ ಮತ್ತು ಕೆಲವು ಕರ್ಮಗಳು ಕೂಡಾ ಕಳೆಯುತ್ತವೆ. ನಿಮ್ಮೊಂದಿಗೆ ಬೆಳಕು ಸದಾ ಇರುವಂತೆ ಬೇಡಿಕೊಂಡು, ಕೆಲಸದಲ್ಲಿ ಮಗ್ನರಾಗಿ. ಬೆಳಕು ನಿಮ್ಮೊಂದಿಗೆ ಯಾವಾಗಲೂ ಇರುತ್ತದೆ.

ವಿಶ್ವವು ಒಂದು ಯೋಜನೆ, ಒಂದು ರೀತಿಯ ನಿರ್ದಿಷ್ಟ ಕಾರ್ಯಕ್ರಮವನ್ನು ಹೊಂದಿದೆ. ನಾವು ಅದರ ಭಾಗ. ಸೃಷ್ಟಿಯ ಮೂಲ ಸತ್ಯಗಳನ್ನು, ಪುನರ್ಜನ್ಮ ಮತ್ತು ಕರ್ಮದ ನಿಯಮಗಳ ಬಗ್ಗೆ ಅರ್ಥ ಮಾಡಿಕೊಳ್ಳುವುದು, ಆದ್ಯತೆಗಳನ್ನು ಆರಿಸಿಕೊಳ್ಳಲು ಸಹಾಯ ಮಾಡುತ್ತದೆ ಮತ್ತು ವಿಶ್ವದೊಂದಿಗೆ ಸುಲಭವಾಗಿ ಶ್ರುತಿಗೊಳ್ಳುವುದು ಮತ್ತು ವಿಶ್ವವನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ವಿಶ್ವದೊಂದಿಗೆ ಇರುವುದರಲ್ಲಿ ಎಣೆಯಿಲ್ಲದ ಹರ್ಷವಿದೆ. ನಮ್ಮ ವೈಯುಕ್ತಿಕ ಯೋಜನೆಗಳು ವಿಶ್ವದ ಯೋಜನೆಗಳೊಂದಿಗೆ ಅನುಗುಣವಾಗಿರಬೇಕು. ಇದನ್ನು ಅರ್ಥಮಾಡಿಕೊಳ್ಳಲು, ಋಷಿಗಳಿಂದ ಬಂದಿರುವ ಮೂಲಭೂತ ಸತ್ಯಗಳನ್ನು ಹೊಂದಿರುವ ನಮ್ಮ ಪುಸ್ತಕಗಳನ್ನು ಪುನಃ ಓದಿ.

ನಮ್ಮ ಸಮಸ್ಯೆಗಳನ್ನು ನಾವೇ ಪರಿಹರಿಸಿಕೊಳ್ಳಬೇಕು, ಏಕೆಂದರೆ ಇವುಗಳನ್ನು ಸೃಷ್ಟಿಮಾಡಿದ್ದೇ ನಾವು. ನಾವು, ನಮ್ಮ ವಿವೇಕ, ಸಾಮಾನ್ಯ ಪರಿಜ್ಞಾನ, ಸಾಮರ್ಥ್ಯ ಹಾಗೂ ಅಂತರ್–ಗ್ರಹಣ–ಶಕ್ತಿಗಳನ್ನು ಉಪಯೋಗಿಸಿಕೊಳ್ಳಬೇಕು. ಧ್ಯಾನಗಳು ನಮಗೆ ಹೆಚ್ಚಿನ ಸಾಮರ್ಥ್ಯ ನೀಡುತ್ತವೆ. ನಮಗೆ ಸಮಸ್ಯೆಗಳನ್ನು ಪರಿಹರಿಸಲು ಆಗದಿದ್ದಾಗ, ನಾವು ಅವನನ್ನು ಆಧ್ಯಾತ್ಮಿಕ ದೃಷ್ಟಿಕೋನದಿಂದ, ಋಷಿಗಳ ಮತ್ತು ವಿಶ್ವದಿಂದ ಸಹಾಯ ಪಡೆದು, ನಿರ್ವಹಿಸಿಕೊಳ್ಳಬೇಕು ಎಂದು ಅರಿಯಬೇಕು. ನಾವು ಧ್ಯಾನ ಮಾಡಬೇಕು ಮತ್ತು ಕರ್ಮಗಳನ್ನು ಕಳೆದುಕೊಳ್ಳಬೇಕು.

ಧ್ಯಾನ ನಮ್ಮ ಜೀವನಕ್ಕೆ ದೃಢತೆಯನ್ನು ತರುತ್ತದೆ. ಅವು ನಮ್ಮ ಜೀವನದಲ್ಲಿ ಚಿತ್ತಸ್ವಾಸ್ಥ್ಯ, ವಿವೇಕ ಮತ್ತು ಒಂದು ಗುರಿಯನ್ನು ತರುತ್ತವೆ. ಧ್ಯಾನ ಮಾಡೋಣ ಮತ್ತು ಸುಖವಾಗಿ ಬಾಳೋಣ.

ಹೊಸ ಗ್ರಹಿಕೆಗಳು: ಸಂತೋಷ, ಕೆಲವು ಸಲ ನೋವು ಮತ್ತು ಸಮಸ್ಯೆಗಳನ್ನು ತರುವ ಕರ್ಮಗಳನ್ನು ನಾವು ಅನುಭವಿಸಬೇಕು. ಕರ್ಮಗಳು ಬುದ್ಧಿಶಕ್ತಿಯನ್ನು ಹೊಂದಿರುತ್ತವೆ. ಋಷಿಗಳಿಗಾಗಿ ಕೆಲಸ ಮಾಡುವಾಗ ಕರ್ಮಗಳು ನಮ್ಮನ್ನು ಬಾಧಿಸುವುದಿಲ್ಲ. ನಾವು ಜೀವನದಲ್ಲಿ ಒಂದು ಹೊಡೆತ ತಿನ್ನಬೇಕಾದರೂ ಋಷಿಗಳು ಅದನ್ನು ಮೃದುಗೊಳಿಸುತ್ತಾರೆ. ಇದು ನಿಜವಾಗಿಯೂ ನಂಬಲಸಾಧ್ಯ!

ದೇಹ, ಮನಸ್ಸು ಮತ್ತು ಬುದ್ಧಿಗಳು ತಮ್ಮದೇ ಆದ ಸ್ವಂತಿಕೆ ಮತ್ತು ಬುದ್ಧಿಶಕ್ತಿ ಹೊಂದಿರುವ ಸ್ವತಂತ್ರ ಅಸ್ತಿತ್ವಗಳು. ಅವುಗಳಿಗೆ ಭಾವನೆಗಳಿವೆ, ಪ್ರಶಂಸೆ ಮತ್ತು ಅಭಿಪ್ರಾಯಗಳನ್ನು ಹೊಂದಿವೆ. ನಮಗೆ ದೊರೆತಿರುವ ಈ ಉಡುಗೊರೆಗಳನ್ನು ನಾವು ಚೆನ್ನಾಗಿ ನೋಡಿಕೊಂಡರೆ, ನಮಗೆ ಒಂದು ಆನಂದದಾಯಕ ಅನುಭವ ಕೊಡುವುದರಿಂದ ಅವು ತಮ್ಮ ಮೆಚ್ಚುಗೆಯನ್ನು ತೋರಿಸುತ್ತವೆ.

ಸಂಚಲನೆಯಾಗುತ್ತಿರುವ ಬೆಳಕಿನ ಹಿಂದೆ ಒಂದು ವ್ಯಕ್ತಿತ್ವವಿದೆ ಎಂಬುದನ್ನು ನೀವು ತಿಳಿದರೆ ನೀವು ಅದರೊಂದಿಗೆ ಒಂದು ಸಂಬಂಧವನ್ನು ಬೆಳೆಸಿಕೊಳ್ಳುವಿರಿ. ಆ ಸಂಬಂಧದಲ್ಲಿ ಪ್ರೀತಿ ಇದೆ. ವರ್ಷಗಟ್ಟಲೆ ನೀವು ಬೆಳಕನ್ನು ಚಾನಲ್ ಮಾಡಿದರೂ ಪ್ರೀತಿ ಮತ್ತು ಸಂಬಂಧ ಇಲ್ಲದೆ ಹೋದರೆ ಏನೂ ಸಂಭವಿಸುವುದಿಲ್ಲ.

**27–11–2011**

ಬೆಳಕಿನ ಅನುಭವಿಸುವಿಕೆಯನ್ನು ನಾವು ಗಂಭೀರವಾಗಿ ಪರಿಗಣಿಸಬೇಕು. ಒಂದು ಅನುಭವವಾದರೆ, ಅದು ನಮ್ಮ ಜೀವನಗಳನ್ನೇ ಬದಲಿಸುತ್ತದೆ. ಅದು ಶಾಂತಿಯನ್ನು ತರುವುದಲ್ಲದೆ ನಮ್ಮನ್ನು ಸರಿಯಾದ, ಅರ್ಥಪೂರ್ಣ ಮತ್ತು ಜವಾಬ್ದಾರಿಯುತವಾಗಿ ಬದುಕುವಂತೆ ಮಾಡುತ್ತದೆ ಎಂದು ನನ್ನ ನಂಬಿಕೆ. ನಾವು ಬದಲಾಗಬೇಕು. ಬರಬರುತ್ತ ಸೂಕ್ಷ್ಮವಾಗುತ್ತಿರುವ ಭೂಮಿಯ ತರಂಗಗಳೊಂದಿಗೆ ನಮ್ಮ ತರಂಗಗಳನ್ನು ಶ್ರುತಿಗೂಡಿಸಿಕೊಳ್ಳಬೇಕು. ದೇವರು ಸ್ವತಃ ಬೆಳಕು. ನಾವು ಅವನನ್ನು ಭಾವನಾತ್ಮಕವಾಗಿ, ಬುದ್ಧಿಶಕ್ತಿಯಿಂದ ಮತ್ತು ಆಧ್ಯಾತ್ಮಿಕವಾಗಿ ಅನುಭವಿಸಬೇಕು.

ಬೆಳಕಿನ ಕಾರ್ಯಕರ್ತರಿಂದ ಇಂಟರ್‌ನೆಟ್‌ನಲ್ಲಿ ಚಾನಲ್ ಆಗಿರುವ ಜ್ಞಾನವೆಲ್ಲ ನಿಖರವಾದುದಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಒಪ್ಪಿಕೊಳ್ಳಬೇಕು. ಬೆಳಕಿನ ಕಾರ್ಯಕರ್ತರು ತಮ್ಮದೇ ಸ್ವಂತ ಮೂಲಗಳನ್ನು ಬೇರೆ ಆಯಾಮಗಳಲ್ಲಿ ಹೊಂದಿದ್ದಾರೆ. ಅವರ ಪುಸ್ತಕಗಳು ಬಹಳ ಅಮೂಲ್ಯ ಮಾಹಿತಿಯನ್ನು ಒಳಗೊಂಡಿವೆ. ಋಷಿಗಳು ಅತ್ಯುನ್ನತ ಆಯಾಮಗಳಲ್ಲಿ ಕೆಲಸ ಮಾಡುತ್ತಿರುವುದರಿಂದ ಸತ್ಯಸಂಗತಿ ಬಲ್ಲರು. ಯಾವುದನ್ನೂ ಸಂಪೂರ್ಣವಾಗಿ ಒಪ್ಪಿಕೊಳ್ಳುವುದು ಅಥವಾ ತಿರಸ್ಕರಿಸುವುದು ಬೇಡ. ಎಲ್ಲವನ್ನೂ ನಿಮ್ಮ ಅಂತರ್–ಗ್ರಹಣ–ಶಕ್ತಿಯೊಂದಿಗೆ ಪರೀಕ್ಷಿಸಿಕೊಳ್ಳಿ, ನನಗೆ ತಿಳಿಸಿ ಮತ್ತು ಪರಿಶೀಲಿಸಿಕೊಳ್ಳಿ. ಆದರೆ ಓದುವುದನ್ನು ನಿಲ್ಲಿಸಬೇಡಿ.

ಈ ಬೆಳಕಿನ ಕಾರ್ಯಕರ್ತರು ನಮ್ಮ ಋಷಿಗಳೊಂದಿಗೆ ಸಂಪರ್ಕಗಳನ್ನು ಹೊಂದಿಲ್ಲ ಎಂಬುದನ್ನು ತಿಳಿಯಿರಿ. ಋಷಿಗಳ ಬಗ್ಗೆ ಅವರಿಗೆ ಏನೂ ತಿಳಿಯದೆ ಇರಬಹುದು. ಅವರ ಮೂಲ ಬೇರೆ. ಋಷಿಗಳು ಈ ವಿಷಯಗಳ ಮೇಲೆ ನಿಯಂತ್ರಣ ಹೊಂದಿಲ್ಲ.

ನಮಗೆ ದೀಕ್ಷೆ ಕೊಟ್ಟ ಕ್ಷಣವೇ ನಾವು ಋಷಿಗಳ ಕಾರ್ಯಜಾಲಕ್ಕೆ ಸೇರ್ಪಡೆಯಾಗುತ್ತೇವೆ. ಋಷಿಗಳು ನಮ್ಮನ್ನು ಯಾವಾಗಲೂ ಮೇಲ್ವಿಚಾರಣೆ ಮಾಡುತ್ತಾರೆ. ಅದು ನಮ್ಮ ಸಾಧನೆಯಲ್ಲಿ ಬರುವ ಅಡಚಣೆಗಳನ್ನು ಹೋಗಲಾಡಿಸುವುದಕ್ಕಾಗಿಯೇ ಹೊರತು ನಮ್ಮನ್ನು ವಿಚಾರಣೆ ಮಾಡುವುದಕ್ಕಲ್ಲ.

ಮುಂದಿನ ದಿನಗಳು ಬಹಳ ಉತ್ಕಟ, ಗೊಂದಲಕಾರಿ ಮತ್ತು ಪರೀಕ್ಷಾರ್ಥಕವಾಗಿವೆ. ಕಪ್ಪುಶಕ್ತಿಗಳು ಆಧ್ಯಾತ್ಮಿಕ ಮಾರ್ಗದಿಂದ ನಮ್ಮನ್ನು ದಿಕ್ಕು ತಪ್ಪಿಸಲು ಎಲ್ಲ ಪ್ರಯತ್ನಗಳನ್ನು ಮಾಡುತ್ತವೆ. ಇವುಗಳ ಬಗ್ಗೆ ನೀವು ಅರಿತಿರಬೇಕು. ಯಾವಾಗಲೂ ಜಾಗೃತರಾಗಿರಿ ಮತ್ತು ಋಷಿಗಳೊಂದಿಗೆ ಶ್ರುತಿಗೊಂಡಿರಿ. ಬೆಳಕನ್ನು ಯಾವಾಗಲೂ ಹೊಂದಿರಿ. ನೀವು ಯಾವುದಾದರೂ ಸಂದೇಶವನ್ನು ಪಡೆದಿರಿ ಎಂದು ಭಾವಿಸಿದರೆ ನನ್ನೊಂದಿಗೆ ಪರೀಕ್ಷಿಸಿಕೊಳ್ಳಿ. ನಿಮ್ಮ ಅನುಭವಗಳನ್ನು ನನಗೆ ಬರೆದು ತಿಳಿಸಿ. ಇದು, ನೀವು ಗೊಂದಲಕ್ಕೀಡಾಗುವುದನ್ನು ತಪ್ಪಿಸುತ್ತದೆ. ನೀವು ಸೂಕ್ಷ್ಮಮಟ್ಟದಲ್ಲಿ ಸೂಚನೆಗಳನ್ನು ಪಡೆದರೆ ಅವುಗಳನ್ನು ಅನುಸರಿಸಬೇಡಿ, ಏಕೆಂದರೆ ನಿಮಗೆ ಅವುಗಳ ಮೂಲ ತಿಳಿದಿರುವುದಿಲ್ಲ. ಋಷಿಗಳಿಂದ ಸಂದೇಶಗಳು ಯಾವಾಗಲೂ ನನ್ನ ಮೂಲಕ ಬರುತ್ತವೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫ್ಲೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಸಮರ್ಪಣೆ

**ಪ್ರಗತಿರಾಜ್; ಅನು: ಸುಧಾಕರ್**

ಸಮರ್ಪಣಾ ಸ್ಥಿತಿಯೆಂದರೆ ಬಹುಶಃ ಒದ್ದೆಯಾದ ಜೇಡಿಮಣ್ಣಿನ ಸ್ಥಿತಿಯಲ್ಲಿ ನಾವಿದ್ದು ನಮ್ಮನ್ನು ರೂಪುಗೊಳಿಸಲು ಋಷಿಗಳಿಗೆ ಒಪ್ಪಿಸಿಕೊಳ್ಳುವುದು. ನಾವು ಯಾವುದೇ ಒಂದು ಪ್ರತ್ಯೇಕ ವ್ಯಕ್ತಿಯಾಗಿರದೆ, ಇಡೀ ಸೃಷ್ಟಿಯೊಂದಿಗೆ ಒಂದಾಗಿರುವುದು. ಇದು, ಒಂದು ನೀರಹನಿ ಜಾರಿ ಸಾಗರವನ್ನು ಸೇರುವುದರ ಮುಖಾಂತರ ಇಡೀ ಸಾಗರವಾಗುವಂತೆ. ಸಮರ್ಪಣೆಯಲ್ಲಿ ನಾವು ಸಾಗರವಾಗುವಾಗ, ನಾವೇಕೆ ಕೇವಲ ಒಂದು ಹನಿಯಾಗಿರಬೇಕು? ಸಮರ್ಪಣೆ ಮತ್ತು ವಿನಮ್ರತೆಯ ಶಕ್ತಿ ಇಷ್ಟೊಂದಿದೆ.

ನಾವು ತಪೋನಗರವನ್ನು ಪ್ರವೇಶಿಸುತ್ತಿದ್ದಂತೆ ಸರ್ವಶಕ್ತನಾದ ಆಂಜನೇಯ, ತನ್ನ ಎಲ್ಲ ಶಕ್ತಿಗಳನ್ನು ಸಮರ್ಪಿಸಿ ಶರಣಾಗತಿಯ ಕುರುಹಾಗಿ ವಿನಮ್ರತೆಯಿಂದ ನಿಂತಿರುವುದನ್ನು ಕಾಣುತ್ತೇವೆ.

ನಂತರ, ನಾವು ತಪೋನಗರದಲ್ಲಿ ಸೌಮ್ಯವೇ ಮೈವೆತ್ತಿರುವ ಒಬ್ಬ ಋಷಿಯನ್ನು ಕಾಣಬಹುದು. 'ನಾನೊಬ್ಬ ಮಾರ್ಗದರ್ಶಿ ಮಾತ್ರ' ಎಂದು ಹೇಳುವ ಸರಳ ವ್ಯಕ್ತಿಯನ್ನು ಕಾಣುತ್ತೇವೆ. ಅವರು ಅದೆಲ್ಲವನ್ನೂ ಮೀರಿದವರು ಎಂಬುದು ನಮಗೆಲ್ಲರಿಗೂ ತಿಳಿದಿದೆ.

ಎಲ್ಲ ತಿಳಿದಿರುವ, ಸರ್ವಶಕ್ತರಾದ, ಸಹಾನುಭೂತಿಯುಳ್ಳ ಮತ್ತು ಅವರ ಸಾಮರ್ಥ್ಯಗಳನ್ನು ಎಂದಿಗೂ ಮಾನವರಿಂದ ಅರಿಯಲಾಗದ ಋಷಿಗಳು ಸದಾಕಾಲ ದೇವರಲ್ಲಿ ಶರಣಾದ ನಿರಂತರ ಸ್ಥಿತಿಯಲ್ಲಿರುತ್ತಾರೆ. ಪ್ರೀತಿಯಲ್ಲಿ ಮಾತ್ರ ಸಮರ್ಪಣೆ ಸಾಧ್ಯ. ■

## ಬದುಕುವ ಒಂದು ಸ್ಥಿತಿ

**ಪ್ರಗತಿರಾಜ್; ಅನು: ಸುಧಾಕರ್**

ತಪೋನಗರ ಒಂದು ಸ್ಥಳವಾದರೂ, ವಾಸ್ತವದಲ್ಲಿ ಅದು ಬದುಕುವ ಒಂದು ಸ್ಥಿತಿ.

'ಸಕಾರಾತ್ಮಕಗೊಳ್ಳಿ ಮತ್ತು ಪ್ರೀತಿಯನ್ನು ಅಭಿವ್ಯಕ್ತಿಸಿ' ಎಂಬ ಸರಳ ಬೋಧನೆಯನ್ನು ಸಾಕಾರಗೊಳಿಸುವ ನಾವು ಪ್ರಪಂಚದ ಯಾವ ಭಾಗದಲ್ಲಿ ವಾಸಿಸುತ್ತಿದ್ದರೂ, ಶಾಂತಿ, ಪ್ರೀತಿ, ಸಾಮರಸ್ಯ ಮತ್ತು ಪ್ರತಿಯೊಬ್ಬರನ್ನೂ ಗೌರವಿಸುವ ಸ್ಥಿತಿಯಾದ ಒಂದು 'ತಪೋನಗರ'ವನ್ನು ಸೃಷ್ಟಿಸುತ್ತೇವೆ.

ಇಡೀ ಸೃಷ್ಟಿಯು ಪ್ರೀತಿ ಎಂಬ ಒಂದು ಅಪ್ರತಿಮ ಶಕ್ತಿಯಿಂದ ಹೊರಹೊಮ್ಮಿದೆ ಮತ್ತು ನಮ್ಮಲ್ಲಿ ಏನೇ ವ್ಯತ್ಯಾಸಗಳಿದ್ದರೂ ನಮ್ಮೆಲ್ಲರಿಗೂ ಪರಸ್ಪರ ಸಂಬಂಧವಿದೆ ಎಂಬುದು ಅರ್ಥವಾದ ತಕ್ಷಣವೇ, ಅಲ್ಲಿಯೇ ಒಂದು ತಪೋನಗರ ಪ್ರಾರಂಭವಾಗುತ್ತದೆ. ತಪೋನಗರವನ್ನು ನಮ್ಮ ಹೃದಯಗಳಲ್ಲಿ ಸ್ಥಾಪಿಸಿ, ಅದನ್ನು ನಮ್ಮ ಜೀವನದಲ್ಲಿ ಅಭಿವ್ಯಕ್ತಿಸಲು ಪ್ರಾರಂಭಿಸಿದಾಕ್ಷಣ, ಋಷಿಗಳ ಈ ತಾಣಕ್ಕಿರುವ ಭೌತಿಕ ಅಂತರ ಕರಗಿಹೋಗುತ್ತದೆ. ■

## ಪತ್ರಗಳು

**(ಸಂ: ಶೋಭಾ ಕೆ. ರಾವ್; ಅನು: ಸುಧಾಕರ್)**

ವಾಲಂಟಿಯರ್ ಆಗಿ ಸೇವೆ ಸಲ್ಲಿಸುವ ಅದ್ಭುತ ಅವಕಾಶವನ್ನು ಒದಗಿಸಿದ್ದಕ್ಕಾಗಿ ನಾನು ಕೃತಜ್ಞಳಾಗಿದ್ದೇನೆ. ನನ್ನಿಂದ ನಿರೀಕ್ಷಿಸಿರುವುದೆಲ್ಲವನ್ನೂ ನಾನು ಕಾರ್ಯರೂಪಕ್ಕೆ ತರುವುದಕ್ಕಾಗಿ ನಿಮ್ಮ ಮಾರ್ಗದರ್ಶನ ಮತ್ತು ಆಶೀರ್ವಾದವನ್ನು ಕೋರುತ್ತೇನೆ. ಜೀವಿಸುವ ಮತ್ತು ಅನುಭವಿಸುವ ಆನಂದವನ್ನು ಪುನಃ ಕಂಡುಕೊಳ್ಳಲು ನೀವು ನಮಗೆ ಸಹಾಯ ಮಾಡುತ್ತಿದ್ದೀರಿ. ನನಗೆ ಮತ್ತು ನನ್ನ ಹತ್ತಿರದವರಿಗಷ್ಟೇ ಅಲ್ಲ, ಆದರೆ ಇಡೀ ಸೃಷ್ಟಿಗೇ ವಿಸ್ತರಿಸುತ್ತಿರುವ ನಿಮ್ಮ ಕೃಪೆಯನ್ನು ನಾನು ಅನುಭವಿಸುತ್ತೇನೆ. ನನ್ನೊಳಗಿರುವ ಸಾಮರಸ್ಯ ಮತ್ತು ಶಾಂತಿಯನ್ನು ಕಂಡು ನನಗೆ ವಿಸ್ಮಯವಾಗಿದೆ. ಅದೊಂದು ತೃಪ್ತಿಕರ ಮತ್ತು ಶ್ರೀಮಂತ ಅನುಭವ.

– ಉಷಾ ಸತೀಶ್ಚಂದ್ರ

ಧ್ಯಾನಮಾಡಲು ಮತ್ತು ಋಷಿಗಳೊಂದಿಗೆ ಕೆಲ ಸಮಯ ಕಳೆಯಲೆಂದು ನಾನು ಮಾನಸಕ್ಕೆ ಪ್ರತಿದಿನವೂ ಬರುತ್ತೇನೆ. ಇದು ನನ್ನಲ್ಲಿರುವ ಸಕಾರಾತ್ಮಕತೆಯನ್ನು ವರ್ಧಿಸಿದೆ. ಪ್ರೀತಿಯ ಚೈತನ್ಯವನ್ನು ನಾನು ದೃಶ್ಯೀಕರಿಸಿಕೊಳ್ಳುತ್ತೇನೆ ಮತ್ತು ನಾನು ಪೂರ್ಣ ಆನಂದದಲ್ಲಿರುತ್ತೇನೆ. ಮಾನಸದ ಒಂದು ಭಾಗವಾಗಿರಲು ನನಗೆ ಹೆಮ್ಮೆಯೆನಿಸುತ್ತದೆ. ನಾನು ಬೇರೆಯವರೊಂದಿಗೆ ಇದರ ಬಗ್ಗೆ ಮಾತನಾಡುವಾಗ, ಇದು ನನ್ನ ಮಾನಸ ಮತ್ತು ನಾನು ಇದಕ್ಕೆ ಸೇರಿದವಳು ಎಂಬ ಒಡೆತನದ ಭಾವನೆ ನನ್ನಲ್ಲಿ ಉಂಟಾಗುತ್ತದೆ.

– ಸುಧಾ ರಾಮನ್

ನನಗೆ ಬೆಳಕಿನೊಡನೆ ಈಗ ಸಂಬಂಧವಿದೆ ಎಂದು ಅನ್ನಿಸುತ್ತದೆ. ಅದಕ್ಕಿಂತ ಹೆಚ್ಚಾಗಿ, ನನ್ನ ಬಗೆಗಿನ ವಿಷಯಗಳು ಕಡಿಮೆಯಾಗಿ, ಈ ಪ್ರಪಂಚದ ನನ್ನ ಎಲ್ಲ ಸಹೋದರ ಸಹೋದರಿಯರಿಗೆ ಉಪಯುಕ್ತವಾಗುವ ವಿಷಯಗಳು ಹೆಚ್ಚಾಗುತ್ತಿವೆ. ಇತ್ತೀಚೆಗೆ ಹೆಚ್ಚು ಪವಾಡಗಳೂ ನನ್ನ ಅನುಭವಕ್ಕೆ ಬರುತ್ತಿವೆ. ಅವುಗಳಿಂದಾಗಿ ನನ್ನನ್ನು ಒಂದು ಅಗೋಚರ ಶಕ್ತಿ ರಕ್ಷಿಸುತ್ತದೆ ಮತ್ತು ನನಗೆ ಬೇಕಾದುದೆಲ್ಲವೂ ಸಿಗುತ್ತದೆ ಎಂದೆನಿಸುತ್ತದೆ.

– ಸಂದೀಪ್ ಬ್ಯಾನರ್ಜಿ

27ನೇ ನವೆಂಬರ್ 2011ರಂದು ನಾನು ವಿಶ್ವಚೇತನ ಮಂದಿರಕ್ಕೆ ಸಂಪರ್ಕಗೊಂಡು, ಬೆಳಕು ಮತ್ತು ಪ್ರೀತಿಯನ್ನು ಒಂದು ವ್ಯಕ್ತಿಗೆ ಕಳಿಸಿದೆ. ನಂತರ, ಆಕೆಗೆ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶ ಮಾಡಿಕೊಟ್ಟೆ, ನನ್ನ ಭಾವನೆಗಳನ್ನು ಕೂಡ ಶಾಂತವಾಗಿ ವ್ಯಕ್ತಪಡಿಸಿದೆ. ಇದಕ್ಕೆ ಗುರೂಜಿಯವರ ಬೆಳಕು ನನ್ನ ಹೃದಯದಲ್ಲಿರುವುದೇ ಕಾರಣ. ಹೊರಡುವಾಗ ಆಕೆಯನ್ನು ಆಲಂಗಿಸಿಕೊಂಡು, ನಾವು ಪ್ರೀತಿಯಿಂದಿರೋಣ ಮತ್ತು ಬೆಳಕನ್ನು ಒಬ್ಬರಿಗೊಬ್ಬರು ಕಳಿಸೋಣ ಎಂದು ಹೇಳಿದೆ. ಆಗ ವಿಶ್ವಚೇತನ ಮಂದಿರದಿಂದ ಚೈತನ್ಯಗಳು ನನ್ನೊಳಕ್ಕೆ ಹರಿದು ಬರುವುದರ ಅನುಭವವಾಯಿತು.

– ಸೌಮ್ಯ ಅಜಯ್

## ಪ್ರಶ್ನೆಗಳು ಮತ್ತು ಉತ್ತರಗಳು

**(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)**

**ಪ್ರ: ಜೀವಶಕ್ತಿ ಮತ್ತು ಪ್ರಾಣ ಬೇರೆ ಬೇರೆಯೇ?**

ಉ: ಹೌದು. ಸೂರ್ಯನಿಂದ ಹಲವು ವಿಧದ ಪ್ರಾಣಗಳನ್ನು ನಾವು ಪಡೆಯುತ್ತೇವೆ. ಆದರೆ ಜೀವ–ಶಕ್ತಿಯನ್ನು ನಾವು ದೈವಿಕ ಬ್ರಹ್ಮಾಂಡದಿಂದ, ಮಹಾವಿಷ್ಣುವಿನಿಂದ ಪಡೆಯುತ್ತೇವೆ. ಪ್ರಾಣ ಜೀವನದ ಗುಣಮಟ್ಟವನ್ನು ಹೆಚ್ಚಿಸುತ್ತದೆ, ನಮಗೆ ಉತ್ತಮ ಆರೋಗ್ಯವನ್ನು ನೀಡುತ್ತದೆ, ನಮ್ಮ ಇಡೀ ಶರೀರ ವ್ಯವಸ್ಥೆಯನ್ನು ಅದರಲ್ಲೂ ಮುಖ್ಯವಾಗಿ ನಮ್ಮ ಮನಸ್ಸನ್ನು ಶುದ್ಧಗೊಳಿಸುತ್ತದೆ. ಜೀವ–ಶಕ್ತಿ ನಮ್ಮ ಶರೀರ ವ್ಯವಸ್ಥೆಯಲ್ಲಿ ಮತ್ತು ಅಖಂಡ ಸೃಷ್ಟಿಯಲ್ಲಿ ಜೀವವನ್ನು ತುಂಬುತ್ತದೆ. ಅದು ಮಾನವ ದೇಹದ ವಿಕಸನಕ್ಕೆ ಸಹಾಯಮಾಡುತ್ತದೆ, ನಾವು ಯಾವಾಗಲೂ ಭರವಸೆಯನ್ನು ಹೊಂದಿರುವಂತೆ ಮತ್ತು ಎಲ್ಲ ಪ್ರತಿಕೂಲ ಸನ್ನಿವೇಶಗಳನ್ನು ಎದುರಿಸಲು ಶಕ್ತಿಯನ್ನು ಕೊಡುತ್ತದೆ. ಜೀವ–ಶಕ್ತಿಯು ಸೃಷ್ಟಿಯ ಎಲ್ಲ ಚಟುವಟಿಕೆಗಳ ಮತ್ತು ಎಲ್ಲ ಸೃಜನಾತ್ಮಕ ಕಾರ್ಯಗಳ ಹಿಂದೆ ಇದೆ. ಅದು ಎಲ್ಲೆಲ್ಲೂ ಇದೆ.

**ಪ್ರ: ಜನರು ಬೇರೆಯವರಿಂದ ಶಕ್ತಿಗಳನ್ನು ಕದಿಯುತ್ತಾರೆಯೇ?**

ಉ: ಹೌದು.

**ಪ್ರ: ನಾವು ಏನನ್ನಾದರೂ ಬಯಸಿದರೆ, ಅದು ಕೂಡಾ ನಮ್ಮನ್ನು ಬಯಸುತ್ತದೆ. ಇದು ಸತ್ಯವೇ?**

ಉ: ಇದು ಭಾಗಶಃ ಸತ್ಯ. ವಿಶ್ವವು ನಮಗೆ ಹಲವು ವಸ್ತುಗಳನ್ನು ಕೊಡಲು ಕಾಯುತ್ತಿದೆ, ಆದರೆ ನಮಗೆ ಅದರ ಅರಿವಿಲ್ಲ, ಏಕೆಂದರೆ ನಾವು ಅದನ್ನು ಸ್ವೀಕರಿಸಲು ಸಿದ್ಧರಾಗಿಲ್ಲ ಅಥವಾ ನಾವು ಬೇರೆ ಏನನ್ನೋ ಬೇಡುತ್ತಿರುತ್ತೇವೆ. ನಾವು ವಿಶ್ವದೊಡನೆ ಪ್ರತಿಕ್ರಿಯಿಸಲು ಆರಂಭಿಸಬೇಕು. ವಿಶ್ವದ ಮೇಲೆ ಸಂಪೂರ್ಣ ನಂಬಿಕೆ ಇಡಬೇಕು. ಆಗ ನಮ್ಮ ಬದುಕು ಸಂಪೂರ್ಣವಾಗಿ ಬೇರೆಯಾಗಿರುತ್ತದೆ.

**ಪ್ರ: ಬದುಕಿನ ಮೂಲ ಉದ್ದೇಶವೇನು?**

ಉ: ಬದುಕಿನ ಮೂಲ ಉದ್ದೇಶ – ಜೀವನವನ್ನು ಅಭಿವ್ಯಕ್ತಗೊಳಿಸುವುದು, ಜೀವಶಕ್ತಿಯನ್ನು ಅಭಿವ್ಯಕ್ತಗೊಳಿಸುವುದು, ಪ್ರೀತಿಯನ್ನು ಮತ್ತು ದೈವತ್ವವನ್ನು ವ್ಯಕ್ತಗೊಳಿಸುವುದು.

**ಪ್ರ: ಒಬ್ಬ ವ್ಯಕ್ತಿ ನಿರಂತರ ನಿರಾಶೆಗಳನ್ನು ಹೇಗೆ ನಿಭಾಯಿಸಬಹುದು?**

ಉ: ಎಂದಿಗೂ ಭರವಸೆಯನ್ನು ಕಳೆದುಕೊಳ್ಳಬೇಡಿ, ನಿಮ್ಮ ಪ್ರಯತ್ನಗಳನ್ನು ಪುನರ್ವ್ಯವಸ್ಥೆಗೊಳಿಸಿ. ಜೀವನದಲ್ಲಿ ಯಾವಾಗಲೂ ಇನ್ನೊಂದು ತಿರುವಿರುತ್ತದೆ. ಆ ಸಮಯದಲ್ಲಿನ ನಿಮ್ಮ ಪ್ರಯತ್ನ ಸರಿಯಿದೆಯೇ ಎಂದು ನೀವು ಪರೀಕ್ಷಿಸಿಕೊಳ್ಳಬಹುದು. ನಿಯತವಾಗಿ ಧ್ಯಾನ ಮಾಡಿ. ನಿಮಗೆ ಸಹಾಯ ಮತ್ತು ಮಾರ್ಗದರ್ಶನ ದೊರೆಯುತ್ತದೆ. ನಾವು ವಿಶ್ವವನ್ನು ನಂಬಬೇಕು. ನಾವು ಒಳ್ಳೆಯವರಾಗಿ, ಪ್ರಾಮಾಣಿಕರಾಗಿ ಮತ್ತು ಸಹನಾಶೀಲರಾಗಿ, ನಮ್ಮನ್ನು ನಾವು ಆಧ್ಯಾತ್ಮಿಕವಾಗಿಸಿಕೊಂಡು, ವಿಶ್ವದಿಂದ ಸಹಾಯ ಪಡೆಯುವುದನ್ನು ಕಲಿಯಬೇಕು. ಆಗ ನೀವು ಯಾವುದೇ ವಿಧವಾದ ಕಷ್ಟಗಳಿಂದ ಹೊರಬರಬಹುದು.

**ಪ್ರ: ನಾವು ಬೇರೆಯವರೊಂದಿಗೆ ನಮ್ಮ ಸಂಬಂಧಗಳನ್ನು ವಿವೇಚನಾಯುಕ್ತವಾಗಿ ಹೇಗೆ ನಿಭಾಯಿಸಬಹುದು?**

ಉ: ನೀವು ವಿಶ್ವದೊಂದಿಗೆ ಮತ್ತು ಎಲ್ಲರೊಂದಿಗೆ ಪ್ರೀತಿಯನ್ನು ಹೊಂದಿದ್ದರೆ, ನೀವು ಯಾವ ಸಂಬಂಧಗಳನ್ನಾದರೂ ನಿಭಾಯಿಸಬಹುದು. ಬೇರೆಯವರ ಜೀವನದಲ್ಲಿ ಪ್ರವೇಶ ಮಾಡಬೇಡಿ. ನಾವು ಬೇರೆಯವರೊಂದಿಗೆ ಪ್ರತಿಕ್ರಿಯಿಸುವಾಗ, ಕೆಲವೊಮ್ಮೆ ನಮ್ಮ ಗಮನವನ್ನು ಈ ಭೂಮಿಯಿಂದಾಚೆಗಿನ ಜೀವನಕ್ಕೆ, ದೇವರ ಸಾನ್ನಿಧ್ಯಕ್ಕೆ ಬದಲಾಯಿಸೋಣ. ಈ ಭೂಮಿಯ ಮೇಲಿನ ಬದುಕಿಗಿಂತ ಉನ್ನತವಾದ ಬೇರೊಂದು ಬದುಕಿದೆ ಎನ್ನುವ ಅರಿವು ನಮ್ಮ ಬದುಕನ್ನು ಸುಂದರವನ್ನಾಗಿಸುತ್ತದೆ.

**ಪ್ರ: ಈ ಪೃಥ್ವಿ ಶಾಶ್ವತವಾಗಿ ಸತ್ಯಯುಗದಲ್ಲಿ ಇರುತ್ತದೆಂದು ನಾನು ಕೇಳಿದ್ದೇನೆ. ಹಾಗಾದರೆ 51000 ವರುಷಗಳಿಗೊಮ್ಮೆ ತೆರೆಯಲ್ಪಡುವ ಈ ಕೇಂದ್ರ ಏನಾಗುತ್ತದೆ?**

ಉ: ಹಾಗೇನಾದರೂ ಆದರೆ ನಾವು ಈ ಕೇಂದ್ರವನ್ನು ಮುಚ್ಚುತ್ತೇವೆ, ಆದರೆ ಕೆಲಸ ಮುಂದುವರಿಯುತ್ತದೆ. ಹೊಸ ಯುಗದ ಬದಲಾವಣೆಗೆ ಇಲ್ಲಿ ಕೆಲಸಮಾಡುತ್ತಿರುವ ಜನರು ಬೇರೆ ಪೃಥ್ವಿಗಳಲ್ಲಿ ಕೆಲಸ ಮಾಡುತ್ತಾರೆ. ಆದರೆ ಸತ್ಯಯುಗದಲ್ಲಿ ಶಾಶ್ವತವಾಗಿ ಈ ಪೃಥ್ವಿ ಇರುವುದನ್ನು ಇನ್ನೂ ನಿರ್ಧರಿಸಬೇಕಾಗಿದೆ.


**ಪ್ರ: ಪ್ರೀತಿ ಎಂದರೇನು?**

ಉ: ಅದು ಸಮಸ್ತ ಸೃಷ್ಟಿಯ ಹಿಂದಿರುವ ಶಕ್ತಿ. ದೈವೀ ಪ್ರೀತಿಯನ್ನು ತಿಳಿಯಬೇಕಾದರೆ ನಾವು ಬೆಳಕನ್ನು ಅನುಭವಿಸಬೇಕು. ನಾವು ಸಮಾಧಿಯನ್ನು ಅನುಭವಿಸಲೇಬೇಕು. ಅದನ್ನು ಶಬ್ದಗಳಲ್ಲಿ ವಿವರಿಸಲಾಗುವುದಿಲ್ಲ. ■


### ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 100/- |
| Preparing for 2012 | 100/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| iGuruji - Vol 4 | 150/- |
| iGuruji - Vol 5 | 100/- |
| Higher Communication & Other Realities | 100/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| Guruji Speaks Vol - 4 | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆಗಳು | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ)

ಅಕ್ಟೋಬರ್ ಮೊದಲವಾರ ಒಂದು ದಿನ, ಧ್ಯಾನದ ನಂತರ ನಿತ್ಯದ ಪೂಜೆ ಹಾಗೂ ಆರತಿ ಮಾಡುತ್ತಾ ಕಣ್ಣುಮುಚ್ಚಿದಾಗ, ಒಂದು ದೊಡ್ಡ ದೇವಸ್ಥಾನದ ದರ್ಶನವಾಯಿತು. ಮೂರ್ತಿ ಇರುವ ಜಾಗದಲ್ಲಿ ಬೆಳಕು ಇತ್ತು. ಇಡೀ ದೇವಸ್ಥಾನ ಬೆಳಕಿನಿಂದ ತುಂಬಿತ್ತು. ಅಲ್ಲಿದ್ದ ಜನರೆಲ್ಲ ಬೆಳಕನ್ನು ಅರ್ಪಿಸುತ್ತಿದ್ದರು. ಇನ್ನು ಕೆಲವರು ಬೆಳಕನ್ನು ಪಡೆಯಲು ಬಂದಿದ್ದರು. ಪೂಜಾರಿ ಕೊಡುತ್ತಿದ್ದ ತೀರ್ಥ ಮತ್ತು ಪ್ರಸಾದ ಸಹ ಬೆಳಕೇ ಆಗಿತ್ತು! ಅಲ್ಲಿದ್ದ ಜನಗಳೆಲ್ಲ ಬೆಳಕಿನ ದೇಹಗಳ ರೀತಿಯ ತೇಜಸ್ಸಿನಿಂದ ಕೂಡಿದ್ದರು. ನಾನೂ ಸಹ ಆ ದೃಶ್ಯದ ಒಂದು ಭಾಗವಾಗಿದ್ದೆ. ನನ್ನ ದೇಹ ಅತ್ಯಂತ ಹಗುರವಾಗಿತ್ತು. ಪ್ರಶಾಂತತೆಯ ಅನುಭವವಾಗಿ ನಾನು ಅನುಗ್ರಹೀತಳಾದಂತೆನಿಸಿತು.

– ಸರೋಜ್ ಸಾವ್ಲೆ

ಕೆಲವು ದಿನಗಳ ಹಿಂದೆ, ರಾತ್ರಿ ಬಹಳ ಹೊತ್ತಾಗಿ ಮಲಗಿದೆ. ಸ್ವಲ್ಪ ಸಮಯದಲ್ಲೇ ನನ್ನ ಮೊಬೈಲ್ 'ಬ್ಯಾಟರಿ ಲೋ' ಎಂಬ ಸಂದೇಶ ಕೊಡಲಾರಂಭಿಸಿದರೂ, ಅದನ್ನು ಕಡೆಗಣಿಸಿ ನಿದ್ರಿಸಿದೆ. ಬೆಳಿಗ್ಗೆ ಅದರ ಅಲಾರಂ ಕರೆಯಿಂದ ಎಚ್ಚೆತ್ತು ನೋಡಿದಾಗ ನನ್ನ ಫೋನ್ ಶೇ. 33ರಷ್ಟು ಛಾರ್ಜ್ ಆಗಿತ್ತು. ಧ್ಯಾನದ ನಂತರ ಶೇ.100ರಷ್ಟು ಛಾರ್ಜ್ ಆಗಿತ್ತು. ಅದು ಎರಡು ದಿನಗಳವರೆಗೆ ಕೆಲಸ ಮಾಡಿತು!

– ಜಸ್‌ಪ್ರೀತ್ ಕೌರ್

ಅನಂತ ಚತುರ್ದಶಿಯ ದಿನ ಗಣೇಶನ ವಿಗ್ರಹದ ಮುಂದೆ ಧ್ಯಾನಕ್ಕೆ ಕುಳಿತೆ. ಯಾರೋ ನನಗೆ ಸೂಚನೆ ಕೊಡುತ್ತಿರುವುದು ಸ್ಪಷ್ಟವಾಗಿ ಕೇಳಿಸುತ್ತಿತ್ತು ಮತ್ತು ನನ್ನ ರಕ್ಷಾಕವಚ ಬಲಗೊಳ್ಳುತ್ತಿತ್ತು. ನನ್ನ ಮುಂದೆ ಒಂದು ಸುಂದರವಾದ ಕಣ್ಣನ್ನು ಕಂಡೆ. ನಂತರ ಅದು ಗಣೇಶನ ಕಣ್ಣೆಂದು ಅರ್ಥವಾಯಿತು. ಅದೇ ಜಾಗದಲ್ಲಿ ಗುರೂಜಿಯವರು ಪದ್ಮಾಸನದಲ್ಲಿ ಕುಳಿತು ಧ್ಯಾನ ಮಾಡುತ್ತಿರುವುದನ್ನು ನೋಡಿದೆ. ಆಗ ಗುರೂಜಿಯವರ ತಲೆಯ ಸುತ್ತ ತೇಜೋಮಯವಾದ ಪ್ರಭಾಮಂಡಲವಿತ್ತು.

– ಅನುರಾಧಾ ವೈಯ್ಕರ್

ನಾನು ಜನಗಳ ಜೊತೆ ವ್ಯವಹರಿಸುವಾಗ, ಅವರ ತಮ್ಮ ದುಃಖಗಳನ್ನು ಹೇಳಿದಾಗ, ನಾನೇ ಅವರ ದುಃಖವನ್ನು ಅನುಭವಿಸುತ್ತೇನೆ ಮತ್ತು ನನ್ನ ಗಂಟಲು ಹಾಗೂ ಹೃದಯದಲ್ಲಿ ನೋವಾಗುತ್ತದೆ. ತಕ್ಷಣವೇ ನನ್ನ ಹೃದಯದಿಂದ ಬೆಳಕು ಹೊರಚಿಮ್ಮಿ ಇಡೀ ದೇಹವನ್ನು ಆವರಿಸುತ್ತದೆ. ಕೆಲವೇ ನಿಮಿಷಗಳಲ್ಲಿ ನನ್ನ ಹಿಂದಿನ ಸಂತೋಷದ ಸ್ಥಿತಿಗೆ ಹಿಂತಿರುಗುತ್ತೇನೆ. ನನ್ನ ಸಂತೋಷದ ಮಟ್ಟ ಗಮನಿಸಲ್ಪಡುತ್ತಿರುವಂತೆ ಮತ್ತು ಅದು ಕೆಳಗಿಳಿದಾಗ, ಶುದ್ಧೀಕರಣದ ಪ್ರಕ್ರಿಯೆ ತಂತಾನೇ ಪ್ರಚೋದಿತವಾದಂತೆ ಅನಿಸುತ್ತದೆ.

– ಸೌಮ್ಯ ಅಜಯ್

ಇತ್ತೀಚೆಗೆ ಕೆಲವು ದಿನಗಳ ಹಿಂದೆ ಸುಮ್ಮನೇ ಮೌನವಾಗಿ ಕುಳಿತಿದ್ದಾಗ ಇದ್ದಕ್ಕಿದ್ದಂತೇ ನಾನು 'ವಾಸ್ತವ'ದಿಂದ ಬೇರೆ ಅಲ್ಲ ಮತ್ತು ಪರಿಶುದ್ಧ ಜ್ಞಾನವಾಗಿರುವ ಆ 'ವಾಸ್ತವ'ದ ಒಂದು ಸಣ್ಣ ಕಣ ನಾನು ಎಂಬ ಅರಿವಾಯಿತು. ಎಲ್ಲವನ್ನೂ ಸಾಧ್ಯವಾಗಿಸಬಲ್ಲ ಆ ಶಕ್ತಿ ನನ್ನಲ್ಲಿಯೇ ನೆಲಸಿದೆ ಮತ್ತು ನಾನೇ ಆ ಪರಿಶುದ್ಧ ಸತ್ವವಾಗಿದ್ದೇನೆ. ಅಂದಿನಿಂದ ನನ್ನ ದೃಷ್ಟಿಕೋನ ಸಂಪೂರ್ಣವಾಗಿ ಬದಲಾಗಿದೆ. ನನ್ನ ಸುತ್ತಮುತ್ತಲಿನ ಪ್ರಪಂಚ ಅದೇ ಆದರೂ, ಅದು ಬೇರೆ ರೀತಿ ಕಾಣುತ್ತಿದೆ. ಸಮ್ಮತಿ ಮತ್ತು ಸಮರ್ಪಣೆ ತನ್ನಷ್ಟಕ್ಕೆ ತಾನೇ ಆಗುತ್ತಿದೆ.

– ಪೂರ್ಣಿಮಾ ಪರುಲೇಕರ್

ಒಂದು ರಾತ್ರಿ ಮಲಗಿದ್ದಾಗ ನನ್ನ ದೇಹವನ್ನೆಲ್ಲ ಬಿಳಿಯ ಬೆಳಕಿನಿಂದ ತುಂಬಿಕೊಂಡು, ನಂತರ ಅದನ್ನು ಭೂಮಿಯ ಸುತ್ತ ಹಾಗೂ ಭೂಮಿಯ ಅಂತರಾಳಕ್ಕೆ ಹರಡುವಂತೆ ಪ್ರಾರ್ಥಿಸಿದೆ. ತಕ್ಷಣ, ನನ್ನ ಎದೆಯ ಭಾಗದಲ್ಲಿ ಒಂದು ಹೊಳೆಯುತ್ತಿರುವ ದೊಡ್ಡ ಬಿಳಿ ವಜ್ರವಿರುವಂತೆ ಅನಿಸಿತು. ಬೆಳಕು ಆ ವಜ್ರದ ಮೂಲಕ ಹಾದು ಹೊರಬಂದು ತನ್ನಷ್ಟಕ್ಕೆ ತಾನೇ ಹರಡಲಾರಂಭಿಸಿತು. ನಂತರದ ಕೆಲವು ದಿನಗಳ ತನಕ ಆ ವಜ್ರ ನನ್ನಲ್ಲೇ ಇದ್ದ ಅನುಭವವಾಯಿತು.

– ಪ್ರಗತಿ ರಾಜ್

ನನ್ನ ಮಗಳ ಹದಿಮೂರನೇ ವರ್ಷದ ಹುಟ್ಟುಹಬ್ಬಕ್ಕೆ ಬೆಳಕಿನ ಸಂಚಲನದ ತಂತ್ರವನ್ನು ಇತರ ಉಡುಗೊರೆಗಳೊಂದಿಗೆ ನೀಡಿದೆ. ಇದು ನಾನು ನಿನಗೆ ಇದುವರೆಗೂ ಕೊಟ್ಟಿರದ ಅತ್ಯಂತ ಶ್ರೇಷ್ಠ ಉಡುಗೊರೆ ಮತ್ತು ಅದನ್ನು ಪ್ರತಿದಿನ ಬೆಳಿಗ್ಗೆ ಹಾಗೂ ರಾತ್ರಿ ಅಭ್ಯಾಸಮಾಡಬೇಕು ಎಂದು ಹೇಳಿದೆ. ನಂತರ ಅವಳು ಆ ತಂತ್ರವನ್ನು ಅಭ್ಯಾಸ ಮಾಡಿ, "ಇದು ಅದ್ಭುತವಾಗಿದೆ. ಇದೊಂದು ಅಸಾಧಾರಣ ಅನುಭವ. ಈ ಸಂಚಲನಕ್ಕೆ ನನ್ನ ಕೊಡುಗೆ ನೀಡಲು ಬಹಳ ಸಂತೋಷವಾಗುತ್ತದೆ" ಎಂದು ಹೇಳಿದಳು. ಅದನ್ನು ಕೇಳಿ ನನ್ನ ಕಣ್ಣುಗಳಲ್ಲಿ ನೀರೂರಿ, ನಾನು ಮೂಕವಿಸ್ಮಿತನಾದೆ.

– ವಿಶ್ವಾಸ್ ದೀಕ್ಷಿತ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು - 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ